ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 ಸಂಚಿಕೆ 35 ಆಗಸ್ಟ್ 31, 1980 ಬೆಲೆ : 50 ಪೈಸೆ

ಬಸವಲಿಂಗಪ್ಪನವರ ಕಸರತ್ತು

ಹಿಂದಿನ ಕಂದಾಯ ಮಂತ್ರಿಗಳಾಗಿದ್ದ ಬಸವಲಿಂಗಪ್ಪನವರು, ಅಭಿವೃದ್ಧಿ ತೆರಿಗೆ (ಬೆಟರ್‌ಮೆಂಟ್ ಲೆವಿ)ಯನ್ನು ರದ್ದು ಮಾಡಬೇಕೆಂಬ ಬೇಡಿಕೆಯನ್ನು ಖಂಡಿಸಿ ವರದಿಗಳಲ್ಲಿ ಕಾಣಿಸಿಕೊಂಡಿದ್ದಾರೆ. ಅಷ್ಟು ಸಾಲದೆಂಬಂತೆ, "ಆರ್ಥಿಕ ತುರ್ತುಪರಿಸ್ಥಿತಿ"ಯನ್ನು ಜಾರಿಮಾಡಬೇಕೆಂಬ ಬೇಡಿಕೆಯನ್ನೂ ಮುಂದಿಟ್ಟಿದ್ದಾರೆ.

ಸರ್ವಾಧಿಕಾರವನ್ನು ವಿರೋಧಿಸುವ ಪ್ರಜಾಪ್ರಭುತ್ವವಾದಿ ಶಕ್ತಿಗಳ ಗುಂಪಿನಲ್ಲೇ ಬಸವಲಿಂಗಪ್ಪನವರು ಇನ್ನೂ ಉಳಿದುಕೊಂಡಿರುವುದು ಪ್ರಶಂಸಾರ್ಹವಾದುದು. ಆದರೆ ಆರ್ಥಿಕ ತುರ್ತುಪರಿಸ್ಥಿತಿಗೆ ಅವರು ಶಿಫಾರಸು ಮಾಡಿರುವುದನ್ನು ಟೀಕಿಸದೆ ವಿಧಿಯಿಲ್ಲ. ಎಡಪಂಥೀಯ ಪಕ್ಷಗಳು ಮತ್ತು ಇತರ ಪ್ರಜಾಪ್ರಭುತ್ವವಾದಿ ಶಕ್ತಿಗಳು ರಚಿಸಿರುವ, ಕೇಂದ್ರದ ಮಧ್ಯಪ್ರವೇಶವನ್ನು ಪ್ರತಿಹಂತದಲ್ಲೂ ವಿರೋಧಿಸುವ ಒಂದು ಸರ್ಕಾರದಲ್ಲಿ ಭಾಗವಹಿಸುತ್ತಿರುವ ತಮ್ಮ ಪಕ್ಷದ ಮುಂದಾಳುವಾದ ಅವರು ಆರ್ಥಿಕ ತುರ್ತುಪರಿಸ್ಥಿತಿಗೆ ಸಾರ್ವಜನಿಕವಾಗಿ ಹೇಗೆ ಶಿಫಾರಸು ಮಾಡಿದರೆಂಬುದೇ

ಸಂಪಾದಕೀಯ

ಅರ್ಥವಾಗುತ್ತಿಲ್ಲ. "ಆರ್ಥಿಕ ತುರ್ತುಪರಿಸ್ಥಿತಿ"ಯ ಹಿಂದಿರುವ ಸರ್ವಾಧಿಕಾರಿ ಅಪಾಯವನ್ನು ಬಸವಲಿಂಗಪ್ಪ ಹೇಗೆ ಅರಿಯದೆ ಹೋದರು ? ಬಸವಲಿಂಗಪ್ಪನವರ ಅಭಿಪ್ರಾಯವನ್ನು ತಮ್ಮ ಪಕ್ಷ ಅನುಮೋದಿಸುವುದೇ ಹೇಗೆ ಎಂಬುದನ್ನು ಕಾಂಗ್ರೆಸ್ (ಯು)ನ ಹೊಣೆಗಾರಿಕೆಯುಳ್ಳ ನಾಯಕರು ವಿವರಿಸಬೇಕೆಂದು ನಾವು ನಿರೀಕ್ಷಿಸುತ್ತೇವೆ.

ಅಭಿವೃದ್ಧಿ ತೆರಿಗೆಯನ್ನು ವಜಾಮಾಡಬೇಕೆಂಬ ಬೇಡಿಕೆಯನ್ನು ಬಸವಲಿಂಗಪ್ಪ ವಿರೋಧಿಸಿರುವುದು ಇನ್ನೂ ಕುತೂಹಲಕಾರಿಯಾದುದು. ಸರ್ಕಾರ 785 ಕೋಟಿ ರೂಪಾಯಿಗಳನ್ನು ನೀರಾವರಿ ಯೋಜನೆಗೆ ಖರ್ಚುಮಾಡಿದೆ, ಇದರಿಂದ ಅಲ್ಲಿನ ಜಮೀನಿನ ಬೆಲೆ ತುಂಬ ಹೆಚ್ಚುತ್ತದೆ. ಆದ್ದರಿಂದ ರೈತರು ಅಭಿವೃದ್ಧಿ ತೆರಿಗೆ ಕೊಡಬೇಕೆಂದು ಅವರು ವಾದಿಸುತ್ತಾರೆ. ನಗರ ಜನತೆಯ ವಿರುದ್ಧ ಗ್ರಾಮೀಣ ಜನತೆಯ ಪರವಾದಿ ವಾದಿಸುತ್ತಿದ್ದವರು ಇದೇ ಬಸವಲಿಂಗಪ್ಪ ಮತ್ತು ಅವರ ಪಕ್ಷಕ್ಕೆ ಸೇರಿದವರಲ್ಲವೆ ? ನೀರಾವರಿ ಯೋಜನೆಗೆ ಸರ್ಕಾರ 785 ಕೋಟಿ ರೂಪಾಯಿ ಖರ್ಚುಮಾಡಿದ್ದರೆ ಅದನ್ನು ಬೇರೆ ವಲಯಗಳಿಂದ ವಾಪಸ್ಸು ಪಡೆಯಬೇಕು. ಬೆಳೆಯುತ್ತಿರುವ ಗ್ರಾಮೀಣ ಪ್ರದೇಶಗಳಿಗೆ ಕೃಷಿವಲಯಗಳ ಪ್ರಯೋಜನ ತಲುಪುವುದಕ್ಕೆ ಇದು ಸರಿಯಾದ ವಿಧಾನ. ಅಭಿವೃದ್ಧಿ

(ಕಡೇ ಪುಟ ನೋಡಿ)

ಮೊರಾದಾಬಾದ್

ಮೊರಾದಾಬಾದ್‌ನ ಭೀಕರ ಹತ್ಯಾಕಾಂಡದ ಸುದ್ದಿಯನ್ನು ಕೇಳಿದ ತಕ್ಷಣ ಆ ಪರಿಸ್ಥಿತಿಯನ್ನು ಪ್ರತ್ಯಕ್ಷವಾದಿ ಅಧ್ಯಯನ ಮಾಡಲು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೂವರು ಸಂಸತ್ ಸದಸ್ಯರ ನಿಯೋಗವೊಂದನ್ನು ಪೊಲಿಟ್‌ಬ್ಯೂರೋ ಕಳಿಸಿತು. ಅವರ ವರದಿಯನ್ನು ಪಿ. ಬಿ ಕೂಲಂಕುಷವಾದ ಅಧ್ಯಯನಮಾಡಿ, ಆಗಸ್ಟ್ 13ರ ಬೆಳವಣಿಗೆಗಳನ್ನು ಪರಿಶೀಲಿಸಿದೆ.

ಮೊರಾದಾಬಾದ್‌ನಲ್ಲಿ ನಡೆದ ಆ ಘಟನೆ ಎಲ್ಲಕ್ಕಿಂತ ಭೀಕರವಾದದು. ಅಲ್ಲಿನ ಹತ್ಯಾಕಾಂಡದಲ್ಲಿ ಜೀವತೆತ್ತವರ ಸಂಖ್ಯೆ 200 ರಿಂದ 300 ಎಂದು ಅನಧಿಕೃತ ಲೆಕ್ಕಾಚಾರಗಳು ತಿಳಿಸಿವೆ. ಈದ್ ಪ್ರಾರ್ಥನೆಗೆ ಸೇರಿದ್ದ ಆ ಅಪಾರ ಜನಸ್ತೋಮವನ್ನು ಕೆಲವು ಪ್ರಾಣಿಗಳನ್ನು ಬಿಟ್ಟು ಕೆರಳಿಸಲಾಯಿತು. ಆದರೆ ಹುಚ್ಚಾಪಟ್ಟೆ ಗೋಲೀಬಾರ್ ಮಾಡದೆ ಆಗಲೂ ಸಹ ಪರಿಸ್ಥಿತಿಯನ್ನು ನಿರ್ವಹಿಸಬಹುದಿತ್ತು. ಈ ಅಗಾಧ ಕೊಲೆ ಮತ್ತು ಜೀವನಷ್ಟಗಳ ಹೊಣೆಯನ್ನು ಸಂಪೂರ್ಣವಾಗಿ ಪೋಲೀಸರು ಮತ್ತು ಆಡಳಿತದ ಮೇಲೆ ಪೊಲಿಟ್‌ಬ್ಯೂರೋ ಹೊರಿಸುತ್ತದೆ. ಅಂಥ ಹತ್ಯಾಕಾಂಡ ಅದರಲ್ಲೂ ಈದ್ ದಿನದ ಹತ್ಯಾಕಾಂಡ ಸಹಜವಾಗಿ ಅಲ್ಪಸಂಖ್ಯಾತರ ಪ್ರತಿಕ್ರಿಯೆಯನ್ನು ದೇಶಾದ್ಯಂತ ಕೆರಳಿಸಿದೆ. ಅವರಿಂದ ಪ್ರತಿಭಟನೆಗಳು ಬಂದಿವೆ.

ಪ್ರಧಾನಮಂತ್ರಿ ಮತ್ತು ಗೃಹಮಂತ್ರಿಯವರ ಹೇಳಿಕೆಗಳೂ ಸೇರಿದಂತೆ ಅಧಿಕೃತ ವಕ್ತಾರರ ಹೇಳಿಕೆಗಳು ತೀವ್ರ ನಿರ್ಲಕ್ಷ್ಯ, ಮತ್ತು ಅದಕ್ಷತೆಯನ್ನು ತೋರಿಸುತ್ತವೆ. ಈ ಹತ್ಯೆಗೆ ಕಾರಣರಾದ ಪೋಲೀಸರು ಮತ್ತು ಆಡಳಿತ ಸಿಬ್ಬಂದಿಯ ಮೇಲೆ ತೀವ್ರ ಕ್ರಮಕೈಗೊಳ್ಳುವುದರ ಬದಲು, ಇವರನ್ನು ಸಮರ್ಥಿಸಲು ಕಾರಣಗಳನ್ನು ಹುಡುಕಲಾಗುತ್ತಿದೆ. ಸರ್ಕಾರದ ಈ ಅಸಮರ್ಥನೀಯ ಧೋರಣೆಯನ್ನು ಪಿ. ಬಿ. ಖಂಡಿಸುತ್ತದೆ.

ಮೊರಾದಾಬಾದ್‌ನ ಹುಚ್ಚಾಪಟ್ಟೆ ಹತ್ಯೆಗಳನ್ನು ಮತ್ತು ಪರಿಸ್ಥಿತಿಯನ್ನು ತಪ್ಪಾಗಿ ನಿರ್ವಹಿಸಿರುವುದನ್ನು ಪಿ ಬಿ. ಖಂಡಿಸುತ್ತದೆ. ಸಶಸ್ತ್ರ ಪಡೆಯನ್ನು ಸಂಪೂರ್ಣವಾಗಿ ಕ್ರಮಕೈಕೊಳ್ಳಪಡಿಸಬೇಕು ಮತ್ತು ಗೋಲೀಬಾರಿಗೆ ಕಾರಣರಾದ ಅಧಿಕಾರಿಗಳ ಮೇಲೆ ಉಗ್ರಕ್ರಮ ಕೈಗೊಳ್ಳಬೇಕು ಎಂದು ಅದು ಒತ್ತಾಯಿಸುತ್ತದೆ. ಪೋಲೀಸರ ಭಯಾನಕ ಕ್ರಮಕ್ಕೆ ಬಲಿಯಾದವರ ಬಗ್ಗೆ ಪೊಲಿಟ್‌ಬ್ಯೂರೋ ತನ್ನ ಸಂತಾಪವನ್ನು ಸೂಚಿಸಿ, ಅವರ ಕುಟುಂಬಗಳಿಗೆ, ಗಾಯಗೊಂಡವರಿಗೆ, ಆಸ್ತಿ ಕಳೆಕೊಂಡವರಿಗೆ ಪೂರ್ಣ ಪರಿಹಾರ ಕೊಡಬೇಕೆಂದು ಒತ್ತಾಯಿಸುತ್ತದೆ.

●

ಬಂಡಾಯ ಬರಹಗಾರರಿಗೆ ಗೋವಿಂದಪಿಳ್ಳೈ ಕರೆ

ಲೇಖನ ಸ್ವಾತಂತ್ರ್ಯವನ್ನು ಸರ್ವಾಧಿಕಾರಿಗಳಿಂದ ರಕ್ಷಿಸಿ

ನಮ್ಮ ಪ್ರೀತಿಯ ಇಂಡಿಯಾ ದೇಶದ ಪ್ರಜಾಪ್ರಭುತ್ವವು ಮತ್ತೆ ಗಂಡಾಂತರದಲ್ಲಿ ಸಿಲುಕಿಕೊಂಡಿದೆ. ಪ್ರಜಾಪ್ರಭುತ್ವದ ಕಡು ವೈರಿಗಳು ಅಧಿಕಾರದ ಗದ್ದುಗೆಯನ್ನು ಪುನಃ ಏರಿದ್ದಾರೆ. ಜನತೆಯ ಶತ್ರುಗಳೂ ಆದ ಈ ಸರ್ವಾಧಿಕಾರಿಗಳಿಂದ ಪ್ರಜಾಪ್ರಭುತ್ವವನ್ನು ರಕ್ಷಿಸದಿದ್ದರೆ ಜನರ ಯಾವ ಹಕ್ಕುಗಳೂ ಉಳಿಯುವುದಿಲ್ಲ. ಬರಹಗಾರರ ಅತಿ ಮುಖ್ಯ ಹಕ್ಕು ಮತ್ತು ಸ್ವಾತಂತ್ರ್ಯವಾದ ಲೇಖನ ಸ್ವಾತಂತ್ರ್ಯವೂ ಉಳಿಯುವುದಿಲ್ಲ. ಆದ್ದರಿಂದ ಎಲ್ಲಾ ಬರಹಗಾರರು ಮತ್ತು ಕಲಾವಿದರು ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಸಂಘಟಿತರಾಗಿ ಹೋರಾಡಬೇಕೆಂದು ಮಲೆಯಾಳಂನ ಖ್ಯಾತ ಬರಹಗಾರ ಹಾಗೂ 'ದೇಶಾಭಿಮಾನಿ' ದಿನಪತ್ರಿಕೆಯ ಸಂಪಾದಕರೂ ಆದ ಕಾಂ. ಪಿ. ಗೋವಿಂದಪಿಳ್ಳೈ ಅವರು ಕರೆ ನೀಡಿದ್ದಾರೆ.

ಆಗಸ್ಟ್ 22 ರಂದು ಬಿಜಾಪುರದಲ್ಲಿ ಬಂಡಾಯ ಸಾಹಿತ್ಯ ಸಮ್ಮೇಳನದ ಎರಡನೇ ಸಮ್ಮೇಳನವನ್ನು ಉದ್ಘಾಟಿಸಿ ಗೋವಿಂದಪಿಳ್ಳೈ ಮಾತನಾಡುತ್ತಿದ್ದರು.

ಭಾರತದ ಸುತ್ತಮುತ್ತ ಇರುವ ಬಂಗ್ಲಾ, ಪಾಕಿಸ್ತಾನ, ಶ್ರೀಲಂಕಾ ಮುಂತಾದ ದೇಶಗಳಲ್ಲಿ ಪ್ರಜಾತಂತ್ರವನ್ನು ಧ್ವಂಸ ಮಾಡಿ ಮಿಲಿಟರಿ ಸರಕಾರಗಳನ್ನು ಸ್ಥಾಪಿಸಿರುವ ಸರ್ವಾಧಿಕಾರಿ ಶಕ್ತಿಗಳನ್ನು ಗಮನಿಸಬೇಕೆಂದ "ದೇಶಾಭಿಮಾನಿ" ಸಂಪಾದಕರು, ಭಾರತದಲ್ಲೂ ಉತ್ತರ ಪ್ರದೇಶ, ವಾಯುವ್ಯ ಈಶಾನ್ಯ ಪ್ರದೇಶಗಳಲ್ಲಿ ಛಿದ್ರಕಾರಿ ಶಕ್ತಿಗಳ ಚಟುವಟಿಕೆ ಮುಂತಾದುವನ್ನು ನೋಡಿದರೆ ಪ್ರಜಾಸತ್ತೆಯು ಇಲ್ಲೂ ಅಪಾಯದಲ್ಲಿದೆ ಎಂಬುದು ಸ್ಪಷ್ಟವೆಂದರು.

1975ರಲ್ಲಿ ರಾಷ್ಟ್ರದ ಜನರು ಪ್ರಜಾಪ್ರಭುತ್ವವನ್ನು ಕಳೆದುಕೊಂಡದನ್ನು ಜ್ಞಾಪಿಸಿದ ಗೋವಿಂದಪಿಳ್ಳೈ, 77ರಲ್ಲಿ ಮತ್ತೆ ದೊರಕಿದ ಪ್ರಜಾಪ್ರಭುತ್ವ ಅಲ್ಪಾಯುವಾಯಿತು ಎಂದರು. ಬಡತನ, ಅನಕ್ಷರತೆ ಮತ್ತು ನಿರುದ್ಯೋಗವನ್ನು ಕಾಪಾಡಿಕೊಂಡು ಬರುತ್ತಿರುವ ಬಂಡವಾಳಶಾಹಿ ಹಾಗೂ ಜಮೀನ್ದಾರಿ ಶಕ್ತಿಗಳು ಪ್ರಜಾಪ್ರಭುತ್ವವು ಈ ನಾಡಿನಲ್ಲಿ ಭದ್ರವಾಗಿ ಬೇರೂರಲು ಬಿಡುತ್ತಿಲ್ಲ ಎಂದರು. ಆದ್ದರಿಂದ ಬರಹಗಾರರು ಪ್ರಜಾಪ್ರಭುತ್ವಕ್ಕೆ ಹೋರಾಡಬೇಕಾದರೆ ಅದರ ವಿರೋಧಿಗಳೂ ಆದ ಬಂಡವಾಳಶಾಹಿ ಹಾಗೂ ಜಮೀನ್ದಾರಿ ವರ್ಗದ ವಿರುದ್ಧವೂ ಹೋರಾಡಬೇಕಾಗುತ್ತದೆ ಎಂದರು.

ಸಂಘಟನೆಯ ಅಗತ್ಯ :

ಪ್ರಖ್ಯಾತ ಬರಹಗಾರ ದಿ. ಪ್ರೇಮಚಂದರ ನೇತೃತ್ವದಲ್ಲಿ ಹಿಂದೆ ಇದ್ದ ಅಖಿಲಭಾರತ ಪ್ರಗತಿಪರ ಬರಹಗಾರರ ಸಂಘವನ್ನು ಸ್ಮರಿಸಿದ ಶ್ರೀ ಗೋವಿಂದಪಿಳ್ಳೈ ಅವರು ರಾಜಕೀಯ ಕಾರಣಗಳಿಗಾಗಿ ಅದು ನಿಷ್ಕ್ರಿಯವಾಯಿತು ಎಂದರು. ಮಾರ್ಕ್ಸ್‌ವಾದಿಗಳ, ಅಂಬೇಡ್ಕರ್‌ವಾದಿಗಳ, ಲೋಹಿಯಾವಾದಿಗಳ ದೃಷ್ಟಿಕೋನಗಳು ಬೇರೆ ಬೇರೆ ಇದ್ದರೂ ಇವರೆಲ್ಲರ ಶತ್ರು ಸರ್ವಾಧಿಕಾರಿ ಶಕ್ತಿಗಳು; ಈ ಸರ್ವಾಧಿಕಾರಿಗಳಿಂದ ಜನತಂತ್ರ ರಕ್ಷಿಸಲು ರಾಜಕೀಯ ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಬಲಿಷ್ಠವಾದ ಲೇಖಕರ ಸಂಯುಕ್ತರಂಗವೊಂದು ಅಗತ್ಯವೆಂದ ಪಿಳ್ಳೈ, ಆ ರಂಗವು ಬಂಡಾಯ ಸಾಹಿತ್ಯ ಸಂಘಟನೆಯಾಗಲಿ ಎಂದು ಹೇಳಿದರು.

ಮೂರು ಮುಖ್ಯ ವೈರಿಗಳು :

ಪ್ರಗತಿಯನ್ನು, ಸ್ವಾತಂತ್ರ್ಯವನ್ನು ಬಯಸುವ ಈ ಬಂಡಾಯ ಬರಹಗಾರರ ಮುಂದೆ ಈಗ ಮೂರು ಮುಖ್ಯ ವೈರಿಗಳಿದ್ದಾರೆ. ಸಾವಿರಾರು ವರ್ಷಗಳ ಕಂದಾಚಾರ, ಸಂಪ್ರದಾಯ, ಕರ್ಮಸಿದ್ಧಾಂತ, ಅವತಾರ-ಈ ಮೌಲ್ಯಗಳನ್ನು ವೈಭವೀಕರಿಸುವ ಜಾತಿ-ವರ್ಣ ಪದ್ಧತಿಯು ಮೊದಲ ವೈರಿಯಾದರೆ, ಉತ್ಕೃಷ್ಟವಾದ ಸಮೂಹ ಮಾಧ್ಯಮಗಳ ಮೂಲಕ ಬರುತ್ತಿರುವ ಪಾಶ್ಚಿಮಾತ್ಯ, ಸಾಮ್ರಾಜ್ಯಶಾಹಿ ಮೌಲ್ಯಗಳು ಎರಡನೆಯ ವೈರಿ. ಭಾರತದಲ್ಲೇ ಬೆಳೆದು ಬರುತ್ತಿರುವ ಏಕಸ್ವಾಮ್ಯ ಮನೆತನಗಳ, ನವ ಬೂರ್ಜ್ವಾ ವರ್ಗದ ಹೈಬ್ರಿಡ್ ಸಂಸ್ಕೃತಿಯು ಸಹ ನಮ್ಮ ರೇಡಿಯೊ, ಟೆಲಿವಿಜನ್ ಮತ್ತು ದೊಡ್ಡ ಪತ್ರಿಕೆಗಳ ಮೂಲಕ ಜನರನ್ನು ಧಾಳಿ ಮಾಡುತ್ತಿದೆ. ಈ ವೈರಿಗಳ ವಿರುದ್ಧ ನೀವು ಸಮರಸಾರಬೇಕೆಂದು ಗೋವಿಂದ ಪಿಳ್ಳೈ ಯುವಬರಹಗಾರರಿಗೆ ಮನವಿ ಮಾಡಿದರು.

ಅತ್ಯಂತ ಬಲಿಷ್ಠವಾದ ಈ ವೈರಿಗಳ ವಿರುದ್ಧ ಹೋರಾಟವು ಸುಲಭವಲ್ಲ ಎಂದ ಅವರು ಮಾರ್ಕ್ಸ್‌ವಾದಿ, ಲೋಹಿಯಾವಾದಿ, ಮತ್ತು ದಲಿತ

(ಕಡೇ ಪುಟ ನೋಡಿ)

'ಬಂಡಾಯ ಸಾಹಿತ್ಯ ಸಂಘಟನೆ ಯಾರ ಸ್ವತ್ತೂ ಅಲ್ಲ'

ಬಂಡಾಯ ಸಾಹಿತ್ಯ ಸಂಘಟನೆಯು ಯಾವ ರಾಜಕೀಯ ಪಕ್ಷದ ಖಾಸಗೀ ಸ್ವತ್ತಲ್ಲ ಎಂದು ಖ್ಯಾತ ಕವಿ ಪ್ರೊ. ಚಂದ್ರಶೇಖರಪಾಟೀಲ್ ಅವರು ಹೇಳಿದ್ದಾರೆ.

ಆ. 22, 23ರಂದು ಬಿಜಾಪುರಕ್ಕೆ ಆಗಮಿಸಿ ಎರಡು ದಿವಸಗಳ ಬಂಡಾಯ ಸಾಹಿತ್ಯ ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ 500ಕ್ಕೂ ಹೆಚ್ಚು ಪ್ರತಿನಿಧಿಗಳ ಸಮಾರೋಪ ಸಮಾರಂಭದಲ್ಲಿ ಪ್ರೊ. ಪಾಟೀಲ್ ಮಾತನಾಡುತ್ತಿದ್ದರು.

ಬಂ. ಸಾ. ಸ. ಯು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಅಥವ ಸಮಾಜವಾದಿಗಳ ಸಂಘಟನೆ ಎಂದೆಲ್ಲಾ ಬ್ರ್ಯಾಂಡ್ ಮಾಡಲಾಗುತ್ತಿರುವುದನ್ನು ಅತ್ಯುಗ್ರವಾಗಿ ಆಕ್ಷೇಪಿಸಿದ ಪ್ರೊ. ಪಾಟೀಲರು ಇದು ಕೇವಲ ಸಾಹಿತಿಗಳ, ಬರಹಗಾರರ ಸಂಘಟನೆಯೇ ಹೊರತು ಯಾವ ರಾಜಕೀಯ ಪಕ್ಷದ ಸಂಘಟನೆ ಅಲ್ಲವೇ ಅಲ್ಲ ಎಂದು ಸಾರಿದರು. ಆದರೆ ಎಲ್ಲಾ ಎಡಪಂಥೀಯರು, ಪ್ರಗತಿಪರರು ಮತ್ತು ವಿಚಾರವಾದಿ ಮನೋಭಾವವುಳ್ಳ ಲೇಖಕರು ಇರುವಂತಹ ವಾಮ ಹಾಗೂ ಪ್ರಜಾಸತ್ತಾತ್ಮಕ ಲೇಖಕರ ಸಂಘಟನೆ ಬಂಡಾಯ ಸಾಹಿತ್ಯ ಸಂಘಟನೆಯಾಗಿದೆ ಎಂದರು. ರಾಜ್ಯದಲ್ಲಿ ಸಮರ್ಥ ತರುಣ ಬರಹಗಾರರ ಮತ್ತು ಸಾಮಾಜಿಕ ಕಳಕಳಿಯುಳ್ಳ ಈ ಸಾಹಿತಿಗಳ ಸಂಘಟನೆಯನ್ನು ಒಡೆಯುವ ಉದ್ದೇಶದಿಂದ ಈ ಸಂಘಟನೆಯು ಅವರದು-ಇವರದು ಎಂದೆಲ್ಲಾ ಬ್ರ್ಯಾಂಡ್ ಮಾಡಲಾಗುತ್ತಿದೆ ಎಂದ ಚಂದ್ರಶೇಖರ ಪಾಟೀಲರು, ಮನೆಮುರುಕರ ವಿರುದ್ಧ ಸದಾ ಜಾಗೃತಿಯಿಂದ ಇರಬೇಕೆಂದು ಯುವ ಸಾಹಿತಿಗಳಿಗೆ ಕರೆ ನೀಡಿದರು.

ನಿಸರ್ಗ ಸೌಂದರ್ಯದ ಬಗ್ಗೆ ಬರೆಯುವುದು ಬೇಡ ಎಂಬ ಮಾತನ್ನು ಅನುಮೋದಿಸದ ಕೇರಳದ ಖ್ಯಾತ ಸಾಹಿತಿ ಪಿ. ಗೋವಿಂದಪಿಳ್ಳೈ ಅವರ ಮಾತಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ಸೂಚಿಸಿದರು ಕನ್ನಡ ಕವಿ ಹಾಗೂ ನಾಟಕಕಾರ ಚಂದ್ರಶೇಖರ ಪಾಟೀಲರು. ಲೇಖಕರು ಇಂತಹುದನ್ನೇ ಬರೆಯಬೇಕು, ಇಂತಹುದನ್ನು ಬರೆಯುವುದು ಬೇಡ ಎಂಬ ನಿಯಮ ಹಾಕುವ ಪ್ರವೃತ್ತಿಯನ್ನು ಅವರು ಆಕ್ಷೇಪಿಸಿದರು. ಬರಹಗಾರರು ಎಷ್ಟು ಪ್ರಾಮಾಣಿಕರು ಮತ್ತು ಎಷ್ಟು ವಸ್ತುನಿಷ್ಠರಾಗಿರುತ್ತಾರೆ ಎಂಬುದು ಮುಖ್ಯವಾಗುತ್ತದೆ ಎಂದ ಪಾಟೀಲರು ಸಮಷ್ಟಿಯನ್ನು ಸಮರ್ಥವಾಗಿ ಚಿತ್ರಿಸುವ ಕಲಾಕಾರರು ನಾವಾಗೋಣ ಎಂದು ಹೇಳಿದರು. 'ಹೂವು-ಹೆಣ್ಣು-ತಾರೆ' ಎಂಬ ತಮ್ಮ ಇತ್ತೀಚಿನ ಕವನವನ್ನು ಕವಿಗೋಷ್ಠಿಯಲ್ಲಿ ಪ್ರತಿನಿಧಿಗಳ ಎದುರಿಗೆ ಪಾಟೀಲರು ಸ್ವತಃ ಹಾಡಿದರು.

○

ವಿದ್ಯುತ್ ಕಂಟ್ರಾಕ್ಟರ್ ಮತ್ತು ರೈತರ ಯಶಸ್ವಿ ಧರಣಿ

ಶಿಡ್ಲಘಟ್ಟದ ವಿದ್ಯುಚ್ಛಕ್ತಿ ಕಂಟ್ರಾಕ್ಟರುಗಳು ಮತ್ತು ರೈತರು ತಮ್ಮ ಹಲವಾರು ಬೇಡಿಕೆಗಳ ಈಡೇರಿಕೆಗಾಗಿ 11-8-80ರಂದು ಶಿಡ್ಲಘಟ್ಟದ ಕೆ. ಇ. ಬಿ. ಕಚೇರಿಯ ಮುಂಭಾಗದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ರೈತರ ಪಂಪ್ ಸೆಟ್‌ಗಳಿಗೆ ಸರ್ವೀಸು ಕೊಡಲು ಇಲಾಖೆಯ ವಿಳಂಬ, ಪವರ್‌ಸ್ಯಾಂಕ್ಷನ್‌ನಲ್ಲಿ ವಿಳಂಬ, ಟೆಂಪರರಿ ಸರ್ವೀಸ್‌ಗಳು ಇವುಗಳನ್ನು ಪ್ರತಿಭಟಿಸಿ ಅವರು ಸತ್ಯಾಗ್ರಹ ನಡೆಸಿದರು.

ನಂತರ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕೋಲಾರ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಜಿ. ದೊರೆಸ್ವಾಮಿ, ಕಾರ್ಮಿಕ ಮುಖಂಡ ಕಾಂ. ಎನ್. ಮಣಿ ಅವರು ಅಧಿಕಾರಿಗಳನ್ನು ಭೇಟಿಯಾಗಿ ಮಾತುಕತೆ ನಡೆಸಿದರು ಮನವಿಯನ್ನೂ ಅಲ್ಲಿ ಅರ್ಪಿಸಲಾಯಿತು ಲಿಖಿತ ಮೂಲಕ ಬೇಡಿಕೆಗಳ ಈಡೇರಿಕೆಗೆ ಆಶ್ವಾಸನೆ ಪಡೆದ ನಂತರ ಸತ್ಯಾಗ್ರಹವನ್ನು ನಿಲ್ಲಿಸಲಾಯಿತು.

●

ಕೇಂದ್ರದ ಆರ್ಥಿಕ ಧೋರಣೆ ವಿರುದ್ಧ ಕೇರಳ ರೈತರ ಧರಣಿ

ಕೇಂದ್ರ ಸರ್ಕಾರವು ಕೇರಳದ ಎಡ ಪ್ರಜಾಪ್ರಭುತ್ವವಾದಿ ಸರ್ಕಾರದ ಬಗ್ಗೆ ತೋರಿಸುತ್ತಿರುವ ಅಸಡ್ಡೆತನವನ್ನು ವಿರೋಧಿಸಿ, ಹಾಗೂ ಕೇಂದ್ರದ ಬಂಡವಾಳಶಾಹಿಪರ ಆರ್ಥಿಕ ಧೋರಣೆಯಿಂದ ಉಂಟಾಗುತ್ತಿರುವ ಬೆಲೆ ಏರಿಕೆಯನ್ನು ಪ್ರತಿಭಟಿಸಿ, ಕೇರಳದ ರೈತರು ಮತ್ತು ಮೂರ್ತೆದಾರರು 18-8-80ರಂದು ರಾಜ್ಯದಾದ್ಯಂತ ಎಲ್ಲ ಕೇಂದ್ರ ಸರ್ಕಾರಿ ಕಚೇರಿಗಳ ಮುಂದೆ ಧರಣಿ ಸತ್ಯಾಗ್ರಹ ನಡೆಸಿದರು

1970ರ ಹಿಂದಿನ ಬಾಕಿಗೇಣಿಯು ಸಂಪೂರ್ಣರದ್ದು. ರೈತರ ಸಾಲಗಳ ಬಡ್ಡಿಗಳಿಗೆ ಪರಿಹಾರ, ಗ್ರಾಮಗಳಿಗೆ ವಿದ್ಯುತ್ ಪೂರೈಕೆ, ಪೆಟ್ರೋಲ್, ಡೀಸೆಲ್, ಚಿಮಿಣಿ ಎಣ್ಣೆ, ಗೊಬ್ಬರ ಇವುಗಳಿಗೆ ಕೇಂದ್ರ ಸರ್ಕಾರದ ಸಬ್ಸಿಡಿ, ರಬ್ಬರ್, ಕೋಕೋ, ಕೊಬ್ಬರಿ ಇವುಗಳ ಆಮದನ್ನು ಕೇಂದ್ರ ನಿಲ್ಲಿಸಬೇಕು ಮುಂತಾದ ಹಲವಾರು ಬೇಡಿಕೆಗಳನ್ನು ಅವರು ಒತ್ತಾಯಿಸುತ್ತಿದ್ದಾರೆ, ಮಂಜೇಶ್ವರ, ಹೊಸಂಗಡಿ, ಉಪ್ಪಳ, ಪೆರ್ಲ ಮುಂತಾದ ಕಡೆ ನಡೆದ ಧರಣಿಗಳ ನೇತೃತ್ವ, ಉದ್ಘಾಟನೆಗಳಲ್ಲಿ ಕಾಮ್ರೇಡುಗಳಾದ ಗೋಪಾಲ ಕೆ, ಯು. ಕೆ. ನಾರಾಯಣ, ಜಾರಪ್ಪ ಮಾಸ್ತರ್, ಚಂದ್ರಹಾಸಶೆಟ್ಟಿ, ಎಂ. ರಾಮಚಂದ್ರಗಟ್ಟಿ, ಎ. ಅಬೂಬಕರ್, ಕೃಷ್ಣಶೆಟ್ಟಿ, ಕೃಷ್ಣನಾಯಕ್, ಮದನ ಮಾಸ್ತರ್, ಬಿ. ಎಂ. ರಾಮಯ್ಯಶೆಟ್ಟಿ, ವೈ. ಅನಂತಯ್ಯ ಮುಂತಾದವರು ಭಾಗವಹಿಸಿದ್ದರು.

○

ಪೋಲೀಸ್ ಹಲ್ಲೆಯ ಖಂಡನೆ

ಮಂಗಳೂರು ಬೀಡಿ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯು 21-8-80 ರಂದು ಕಾಂ. ಲೋಕಯ್ಯಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. 18-8-80ರಂದು ಸಂಘದ ಉಪಾಧ್ಯಕ್ಷ ಕಾಂ. ಉಮಾನಾಥ ಮತ್ತಿತರ ಕಾರ್ಯಕರ್ತರ ಮೇಲೆ ನಡೆದ ಪೋಲೀಸ್ ದೌರ್ಜನ್ಯವನ್ನು ಸಭೆ ಖಂಡಿಸಿತು. ○

ಪುತ್ತೂರಲ್ಲಿ ರೈತಸಂಘದ ಸಭೆ

ದ. ಕ. ಜಿಲ್ಲಾ ಪುತ್ತೂರು ತಾಲ್ಲೂಕು ರೈತಸಂಘದ ಸಭೆಯು ತಾ. 16-8-1980ರಂದು ಯು. ಜನಾರ್ಧನ ನಾಯಕರ ಅಧ್ಯಕ್ಷತೆಯಲ್ಲಿ ಸೇರಿತು. ಬಿ. ವಿಷ್ಣುಮೂರ್ತಿಯವರು ಸಂಘದ ಚಟುವಟಿಕೆಯ ವರದಿಯನ್ನು ಸಭೆಯ ಮುಂದೆ ಇಟ್ಟರು. ಕಮಿಟಿಯು ಇದರ ಮೇಲೆ ಚರ್ಚೆ ನಡೆಸಿದ ನಂತರ ಕರ್ನಾಟಕರಾಜ್ಯದಲ್ಲಿ ನಡೆಯುವ ರೈತರ ಚಳುವಳಿಗೆ ಬೆಂಬಲ ವ್ಯಕ್ತಪಡಿಸುವ ನಿರ್ಣಯವನ್ನು ಕೈಗೊಳ್ಳಲಾಯಿತು. ಇದೀಗ ಪುತ್ತೂರು ತಾಲ್ಲೂಕಿನ ನಾನಾ ಭಾಗದಲ್ಲಿ ಎಷ್ಟೋ ವರ್ಷಗಳಿಂದ ಸರಕಾರದ ಬಂಜರು ಭೂಮಿಯನ್ನು ಆಗಮೆ ಮಾಡಿ ಕೃಷಿಮಾಡಿದ ಸ್ಥಳವನ್ನು ಬಿಟ್ಟುಕೊಡಬೇಕೆನ್ನುವ ತೊಂದರೆ ಕೊಡುವುದು ಸಭೆಯ ಗಮನಕ್ಕೆ ಬಂತು, ಈ ಬಗ್ಗೆ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕೂಡಲೇ ಕಂಡು ಇಂತವರಿಗೆ ಡಿ. ನೋಟೀಸು ಕೊಟ್ಟು ಇವರ ದರ್ಖಾಸ್ ಖಾಯಂಗೊಳಿಸುವಂತೆ ಒತ್ತಾಯ ಮಾಡಬೇಕೆಂದು ಕೇಳಿ ಇದಕ್ಕೆ ಸರಿಯಾದ ಕಾರ್ಯಕ್ರಮ ಆಗೋಸ್ತು ಕೊನೆಯೊಳಗೆ ತೆಗೆದುಕೊಳ್ಳದಿದ್ದರೆ ಸಪ್ಟೆಂಬರ ತಿಂಗಳ ಮಧ್ಯಭಾಗದಲ್ಲಿ ತೀವ್ರವಾದ ಚಳುವಳಿಯನ್ನು ಕೈಗೊಳ್ಳಬೇಕೆಂದು ಸಭೆಯು ತೀರ್ಮಾನ ಮಾಡಿತು. ಮುಂದಿನ ಕಾರ್ಯಕಲಾಪಗಳನ್ನು ನಡೆಸಲು ಕೆ. ಲಕ್ಷ್ಮಣಗೌಡರನ್ನು ಕಾರ್ಯದರ್ಶಿಯಾಗಿಯೂ, ಕಾಂ. ಸೂರ್ಯನಾರಾಯಣಭಟ್ಟ ಅಡ್ವಕೇಟ್ ಇವರನ್ನು ಅಧ್ಯಕ್ಷರಾಗಿಯೂ, 16 ಮಂದಿಯ ತಾಲ್ಲೂಕು ಕಮಿಟಿಯನ್ನು ಸಂಘಟಿಸಲಾಯಿತು. ಸಂಘಟನೆಯನ್ನು ನಡೆಸುವ ಬಗ್ಗೆ ಜನಾರ್ಧನ ನಾಯಕ್ ವಿವರಿಸಿ ಹೇಳಿದರು. ನಂತರ ಲಕ್ಷ್ಮಣಗೌಡರು ವಂದನೆಯನ್ನು ಅರ್ಪಿಸಿ ಸಭೆಯು ಮುಕ್ತಾಯವಾಯಿತು.

●

ಬಂ.ಸಾ.ಸ.ಸಂಚಾಲಕರಾಗಿ ರಾಮಚಂದ್ರಪ್ಪ, ಸಿದ್ದಲಿಂಗಯ್ಯ

ಬಂಡಾಯ ಸಾಹಿತ್ಯ ಸಂಘಟನೆಯ ಕೇಂದ್ರ ಸಮಿತಿ ಸಂಚಾಲಕರಾಗಿ ಸಾಹಿತಿ ಬರಗೂರು ರಾಮಚಂದ್ರಪ್ಪ ಮತ್ತು ಕವಿ ಸಿದ್ದಲಿಂಗಯ್ಯ ಸರ್ವಸಮ್ಮತದಿಂದ ನೇಮಕಗೊಂಡಿದ್ದಾರೆ.

ಬಿಜಾಪುರದಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದಲ್ಲಿ ಸಂಘಟನೆಯ ಇತರ ಪದಾಧಿಕಾರಿಗಳಾಗಿ ಕವಿ-ನಾಟಕಕಾರ ಪ್ರೊ. ಚಂದ್ರಶೇಖರ ಪಾಟೀಲ್, ಸಾಹಿತಿ ಕಾಳೇಗೌಡ ನಾಗವಾರ, ಲೇಖಕ ದೇವಯ್ಯಹರವೆ, ಶಿವಪುತ್ರ, ಲೇಖಕಿ ಪರೀಘ, ಕವಿ ಚೆನ್ನಣ್ಣ ವಾಲೀಕರ ಮುಂತಾದವರು ಆಯ್ಕೆಯಾದರು.

ಸಂಘಟನೆಯ ಕಾರ್ಯನಿರ್ವಹಣೆಯ ದೃಷ್ಟಿಯಿಂದ ಬೆಂಗಳೂರು, ಮೈಸೂರು, ಹೈದರಾಬಾದ್ ಕರ್ನಾಟಕ, ಮುಂಬೈಕರ್ನಾಟಕ ಹಾಗೂ ಉತ್ತರ ಕರ್ನಾಟಕ ಮತ್ತು ಶಿವಮೊಗ್ಗ ಪ್ರಾಂತೀಯ ವಿಭಾಗಗಳನ್ನು ರಚಿಸಲಾಯಿತು. ಈ ವಿಭಾಗಗಳ ಸಮಿತಿಗಳನ್ನು ರಚಿಸಿಕೊಳ್ಳಲು ಪ್ರಾಂತೀಯ ಸಮಿತಿಗಳಿಗೇ ಅಧಿಕಾರ ಕೊಡಲಾಯಿತು. ಈಗ ಆಯ್ಕೆಯಾಗಿರುವ ಕೇಂದ್ರ ಸಮಿತಿಯು ತಾತ್ಕಾಲಿಕವಾಗಿದ್ದು ಪ್ರಾಂತೀಯ ಸಮಿತಿಗಳ ರಚನೆಯ ನಂತರ ಕೇಂದ್ರ ಸಮಿತಿಯ ಖಾಯಂ ಆಯ್ಕೆಯನ್ನು ಮಾಡಬೇಕೆಂದು ಸಮ್ಮೇಳನದಲ್ಲಿ ನಿರ್ಧರಿಸಲಾಯಿತು.

●

ಕುಣಿಗಲ್‌ನಲ್ಲಿ ಕರಾಳ ದಿನಾಚರಣೆ

ದಲಿತ ಸಂಘರ್ಷ ಸಮಿತಿಯ ತಾಲ್ಲೂಕು ಶಾಖೆಯ ಆಶ್ರಯದಲ್ಲಿ 15-8-1980ರಂದು ಕುಣಿಗಲ್‌ನಲ್ಲಿ ಕರಾಳದಿನ ಆಚರಿಸಲಾಯಿತು. ಕುಣಿಗಲ್ಲಿನ ಮುಖ್ಯ ಬೀದಿಗಳಲ್ಲಿ ನಡೆದ ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗಲಾಯಿತು, ನಂತರದ ಸಭೆಯ ಅಧ್ಯಕ್ಷತೆಯನ್ನು ದಲಿತ ಮುಖಂಡ ಯಲ್ಲಪ್ಪ ಅವರು ವಹಿಸಿದ್ದರು. ಅಂಜಪ್ಪ ಮತ್ತು ಬಿ. ಜಿ. ಗಂಗಾಧರಯ್ಯ ಕ್ರಾಂತಿಗೀತೆಗಳನ್ನು ಹಾಡಿದರು. ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡ ಕಾಂ ಪಿ. ಜಗನ್ನಾಥ್ ಸಭೆಯಲ್ಲಿ ಮಾತನಾಡಿ, ಸಮಾನತೆಯನ್ನು ಆಧಾರಿಸದ ಸ್ವಾತಂತ್ರ್ಯ, ನಿಜವಾದ ಸ್ವಾತಂತ್ರ್ಯವಲ್ಲ. ನಿಜವಾದ ಆರ್ಥಿಕ ಸಾಮಾಜಿಕ ಸ್ವಾತಂತ್ರ್ಯಕ್ಕೆ ದಲಿತರು ಮತ್ತು ದುಡಿಯುವ ಜನತೆ ಒಗ್ಗಟ್ಟಾಗಿ ಹೋರಾಡಬೇಕು ಎಂದು ಕರೆಕೊಟ್ಟರು. ನಂತರ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕೃಷ್ಣಸ್ವಾಮಿಯವರು ಮಾತನಾಡಿ, ನಾವು ಹೋರಾಡಿ ಪಡೆದ ಸ್ವಾತಂತ್ರ್ಯ, ಕೆಲವೇ ಜನರ ಗುತ್ತೇದಾರಿಯಾಗಿದೆ, ಈಗ ಮತ್ತೊಮ್ಮೆ ದುಡಿಯುವ ಜನತೆ ಸ್ವಾತಂತ್ರ್ಯ ಹೋರಾಟ ನಡೆಸಬೇಕಾಗಿದೆ ಎಂದರು. ಕಾರ್ಮಿಕ ಮುಖಂಡ ಮಹಮದ್ ದಸ್ತಗೀರ್, ಸಂಘರ್ಷ ಸಮಿತಿ ಮುಖಂಡ ಬಿ. ಜಿ. ಗಂಗಾಧರಯ್ಯ ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು.

●

ಕಾರ್ಮಿಕ ಮುಖಂಡರ ಮೇಲೆ ಪೋಲೀಸ್ ಹಲ್ಲೆ

ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ಉಪಾಧ್ಯಕ್ಷರಾದ ಕಾಂ. ಬಿ. ಉಮಾನಾಥ ಅವರು 18-8-80ರಂದು ಮಂಗಳೂರಿನ ಬೋಳಾರದಲ್ಲಿರುವ ಕಾರ್ಯಾಲಯಕ್ಕೆ ಹೋಗುತ್ತಿದ್ದಾಗ ಪೋಲೀಸರು ಅವರಿಗೂ ಅವರ ಜೊತೆಯಲ್ಲಿದ್ದ ಕಾರ್ಯಕರ್ತರಿಗೂ ಚೆನ್ನಾಗಿ ಥಳಿಸಿ ಬಂಧಿಸಿದ್ದಾರೆ.

ಯೂನಿಯನ್ ಸಭೆಯು ಈ ಪೋಲೀಸ್ ದೌರ್ಜನ್ಯವನ್ನು ತೀವ್ರವಾಗಿ ಖಂಡಿಸಿದೆ. ಇದಕ್ಕೆ ಕಾರಣರಾದ ಪೋಲೀಸ್ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸಿದೆ.

●

ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಪೊಲಿಟ್‌ಬ್ಯೂರೊ ಹೇಳಿಕೆ

ಆಗಸ್ಟ್ 9 ಮತ್ತು 10 ರಂದು ನವದೆಹಲಿಯಲ್ಲಿ ನಡೆದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪೊಲಿಟ್ ಬ್ಯೂರೋನ ಎರಡು ದಿನಗಳ ಸಭೆಯಲ್ಲಿ, ಜಗತ್ತಿನ ತೀವ್ರ ಬೆಳವಣಿಗೆಗಳನ್ನು ಕುರಿತು ಚರ್ಚಿಸಲಾಯಿತು.

ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ಹೆಚ್ಚಿಸುವ ಮತ್ತು ಯುದ್ಧದ ಅಪಾಯವನ್ನು ಮತ್ತಷ್ಟು ಹತ್ತಿರಕ್ಕೆ ತರುವಂಥ ಅನೇಕ ಕ್ರಮಗಳನ್ನು ಅಮೆರಿಕದ ಸಾಮ್ರಾಜ್ಯಶಾಹಿಗಳು ಕೈಗೊಂಡಿದ್ದಾರೆ. ಸಾಲ್ಟ್ (SALT) ಒಪ್ಪಂದವನ್ನು ಊರ್ಜಿತಗೊಳಿಸಲು ಅವರು ನಿರಾಕರಿಸಿರುವುದು, ರಾಷ್ಟ್ರಗಳ ನಡುವಿನ ವೈಮನಸ್ಯಗಳ ಪರಿಹಾರ ನೀತಿಯನ್ನು ತಲೆಕೆಳಗು ಮಾಡಿರುವುದು, ಯೂರೋಪಿನಲ್ಲಿ ಹೊಸ ಸೈನ್ಯ ಸರಂಜಾಮುಗಳನ್ನು ಇಟ್ಟಿರುವುದು ಇವೆಲ್ಲವೂ ಜಗತ್ತಿನಾದ್ಯಂತ ಬಿಕ್ಕಟ್ಟುಗಳನ್ನು ಹೆಚ್ಚಿಸಿವೆ.

ಭಾರತದ ಗಡಿಗಳಿಗೆ ಹತ್ತಿರವಾದಂತೆ, ಹಿಂದೂ ಮಹಾಸಾಗರದಲ್ಲಿ ಮತ್ತು ಗಲ್ಫ್ ಪ್ರದೇಶದಲ್ಲಿ ಅವರು ಅನೇಕ ಕ್ರಮಗಳನ್ನು ನಡೆಸಿದ್ದಾರೆ. ಇವುಗಳಿಂದ ಪಶ್ಚಿಮ ಏಷ್ಯಾ ಯುದ್ಧದ ಕಣವಾಗುತ್ತಲಿದೆ. ಇವರಿಂದ ಪ್ರೇರಿತರಾದ ಯೆಹೂದ್ಯಸ್ವಾಸ್ಥ್ಯವಾದಿ ಆಡಳಿತ ಜೆರೂಸಲೇಮ್ ಅನ್ನು ಆಕ್ರಮಿ

ಪಾಕಿಸ್ತಾನಿ ಜನತೆಯ ಪ್ರತಿಯೊಂದು ಪ್ರಜಾಪ್ರಭುತ್ವವಾದಿ ಹಕ್ಕನ್ನು ದಮನಮಾಡಿರುವುದಕ್ಕಾಗಿ ಅಲ್ಲಿನ ಮಿಲಿಟರಿ ಸರ್ವಾಧಿಕಾರವನ್ನು ಖಂಡಿಸುತ್ತಿರುವ ಪಾಕಿಸ್ತಾನದ ಪ್ರಜಾಪ್ರಭುತ್ವವಾದಿ ಶಕ್ತಿಗಳಿಗೆ ಪಿ. ಬಿ. ಅಭಿನಂದನೆಗಳನ್ನು ಸಲ್ಲಿಸುತ್ತದೆ.

ಈಶಾನ್ಯವಲಯದ ಮುಂದುವರೆಯುತ್ತಿರುವ ಬಿಕ್ಕಟ್ಟನ್ನು ಪಿ. ಬಿ. ಗಮನಿಸಿತು. ಹಿಂದೆ ಪದೇ ಪದೇ ಹೇಳಿರುವ ಹಾಗೆ ಈ ಬಿಕ್ಕಟ್ಟನ್ನು ಜಮ್ಮು ಮತ್ತು ಕಾಶ್ಮೀರದಲ್ಲಿ ಹೆಚ್ಚುತ್ತಿರುವ ಪ್ರತ್ಯೇಕತಾವಾದಿಗಳ ವಿಪರೀತ ಚಟುವಟಿಕೆಗಳ ಹಿನ್ನೆಲೆಯಲ್ಲಿ ಮತ್ತು ದೇಶದ ಇತರ ಭಾಗಗಳಲ್ಲಿನ ಒಡಕುಹುಟ್ಟಿಸುವ ಶಕ್ತಿಗಳ ಚಟುವಟಿಕೆಗಳ ಹಿನ್ನೆಲೆಯಲ್ಲಿ ಗಮನಿಸಬೇಕು. ದೇಶದ ಐಕ್ಯತೆ ಮತ್ತು ಏಕತೆಯನ್ನು ಉಳಿಸಿ ಬಲಪಡಿಸುವುದರಲ್ಲಿ ಆಸಕ್ತಿ ಹೊಂದಿರುವವರೆಲ್ಲರೂ ಈ ಬೆಳವಣಿಗೆಗಳ ಅಪಾಯದ ಬಗ್ಗೆ ಎಚ್ಚರಿಕೆಯಿಂದಿರಬೇಕೆಂದು ಪಿ. ಬಿ. ಕರೆ ಕೊಟ್ಟಿತು.

ರಾಜ್ಯದ ಜನತೆಯ ಚಳುವಳಿಯನ್ನು ರೂಪಿಸಿದ ವಿಚಾರಗಳ ಬಗ್ಗೆ ಮಾತುಕತೆ ನಡೆಸಲು ಸರ್ಕಾರ ಚಳುವಳಿಕಾರರನ್ನು ಕರೆದಿರುವುದಕ್ಕಾಗಿ ಪಿ. ಬಿ. ಸಂತೋಷ ವ್ಯಕ್ತಪಡಿಸಿತು.

ಸಂಸ್ಥೆಗಳು, ಗುಂಪುಗಳು ಮತ್ತು ವ್ಯಕ್ತಿಗಳಿಗೆ ಪಿ. ಬಿ. ಧನ್ಯವಾದಗಳನ್ನು ಸಲ್ಲಿಸುತ್ತದೆ. ತ್ರಿಪುರದ ವಾಮರಂಗ ಸರ್ಕಾರ ಮತ್ತು ಜನತೆ ತುಂಬ ಕಷ್ಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾರೆ ದೇಶದ ಎಲ್ಲ ಜನರ ಸಹಾನುಭೂತಿ ಮತ್ತು ಬೆಂಬಲ ಅವರಿಗೆ ಬೇಕಾಗಿದೆ.

ಬುಡಕಟ್ಟು ಜನರ ನ್ಯಾಯಬದ್ಧ ಕೊರತೆಗಳನ್ನು ನೀಗಿಸಲು ಮತ್ತು ಅದೇ ವೇಳೆಗೆ ಬುಡಕಟ್ಟಿಗೆ ಸೇರದ ಬಡಜನರ ಹಿತಾಸಕ್ತಿಗಳನ್ನು ಕಾಪಾಡಲು ಮೊತ್ತಮೊದಲ ಬಾರಿಗೆ ವಾಮರಂಗ ಸರ್ಕಾರವು ಕ್ರಮಗಳನ್ನು ಕೈಗೊಂಡಿತು ಎಂಬುದನ್ನು ಪಿ. ಬಿ. ಇಲ್ಲಿ ನೆನಪಿಸುತ್ತದೆ. ವಾಮರಂಗ ಸರ್ಕಾರ ನಿರಂತರವಾಗಿ ಪ್ರಯತ್ನಿಸುತ್ತಿರುವ ಬುಡಕಟ್ಟು ಮತ್ತು ಬುಡಕಟ್ಟಿನವರಲ್ಲದವರ ಐಕ್ಯತೆಯೊಂದೇ ತ್ರಿಪುರದಲ್ಲಿ ಮಾತ್ರವಲ್ಲ ಇಡೀ ಈಶಾನ್ಯ ವಲಯದ ಸಮಸ್ಯೆಯನ್ನು ಪರಿಹರಿಸಬಲ್ಲುದು.

ಈ ಐಕ್ಯತೆಯನ್ನು ರೂಪಿಸುವ ಕಾರ್ಯಕ್ರಮದಲ್ಲಿ ವಾಮರಂಗ ಸರ್ಕಾರಕ್ಕೆ ಸಹಾಯ ಮಾಡುವ ಬದಲು, ಕಾಂಗ್ರೆಸ್ ಸೇರಿದಂತೆ ರಾಜ್ಯದ ಕೆಲವು ರಾಜಕೀಯ ಪಕ್ಷಗಳು ಸನ್ನಿವೇಶದ ರಾಜಕೀಯ ಲಾಭ ಪಡೆದುಕೊಳ್ಳಲು

ಅಲ್ಲ, ವಾಮ ಮತ್ತು ಪ್ರಜಾಪ್ರಭುತ್ವವಾದಿ ಸರ್ಕಾರದ ವಿರುದ್ಧವಾಗಿ ಎಂಬುದು ಸ್ಪಷ್ಟವಾಗುತ್ತದೆ.

ಈಗಿನ ಭೂಸುಧಾರಣಾ ಶಾಸನದಲ್ಲಿನ ಕೊರತೆಗಳನ್ನು ತುಂಬುವ ಮತ್ತು ಶಾಸಕಾಂಗವು ಪಾಸುಮಾಡಿದ್ದ ಭೂಸುಧಾರಣಾ ತಿದ್ದುಪಡಿ ಮಸೂದೆಗೆ ರಾಷ್ಟ್ರಪತಿ ತಮ್ಮ ಅನುಮತಿಯನ್ನು ಕೊಡದಿರುವಂತೆ ಕೇಂದ್ರ ಸರ್ಕಾರವು ನಡೆದುಕೊಂಡಿದೆ ಎಂಬುದನ್ನು ಪಿ. ಬಿ. ಗಮನಿಸಿದೆ. ರಾಜ್ಯದ ಹಕ್ಕುಗಳಲ್ಲಿ ಆದ ಈ ದುಷ್ಟ ಪ್ರವೇಶವನ್ನು, ಭೂರಹಿತರು ಮತ್ತು ಬಡವರ ಮೇಲಿನ ಈ ಆಕ್ರಮಣವನ್ನು ವಿರೋಧಿಸುವಂತೆ ಪಿ. ಬಿ. ಎಲ್ಲ ವಿಚಾರವಾದಿ ರಾಜಕೀಯ ಪಕ್ಷಗಳಿಗೆ, ರೈತರ ಸಾಮೂಹಿಕ ಸಂಘಟನೆಗಳಿಗೆ ಮತ್ತು ಇತರ ಕಾರ್ಮಿಕವರ್ಗಗಳಿಗೆ ಕರೆಕೊಡುತ್ತದೆ.

ಕೇಂದ್ರಸರ್ಕಾರದ ಕೈಗಾರಿಕಾ ನೀತಿ ಹೇಳಿಕೆಯನ್ನು ಪಿ. ಬಿ. ತೀವ್ರವಾಗಿ ತಿರಸ್ಕರಿಸುತ್ತದೆ. ಹಣಕಾಸು ಸಚಿವರು ತಮ್ಮ ಬಜೆಟಿನಲ್ಲಿ ದೊಡ್ಡ ಉದ್ಯಮಿಗಳಿಗೆ ಉದಾರ ರಿಯಾಯಿತಿಗಳನ್ನು ಮತ್ತು ಭಾರತೀಯ ಸಂಪನ್ಮೂಲಗಳನ್ನು ಇನ್ನಷ್ಟು ಶೋಷಿಸುವಂತೆ ಬಹುದೇಶಿ ಕಂಪನಿಗಳಿಗೆ ಆಹ್ವಾನವನ್ನು ಕೊಟ್ಟಿರುವಾಗ ಈ

ಗಮನಿಸಿತು. ಬೆಲೆಗಳ ಮೇಲೆ ಬಜೆಟ್ ಬೀರಲಿರುವ ಪ್ರಭಾವದ ಬಗ್ಗೆ ಹಣಕಾಸು ಸಚಿವರು ಮತ್ತು ಇತರ ಸರ್ಕಾರಿ ವಕ್ತಾರರು ಮಾಡಿದ್ದ ಹೇಳಿಕೆಗಳೆಲ್ಲವೂ ಸುಳ್ಳಾಗಿದೆ. ಕಾರ್ಮಿಕರು, ಮಧ್ಯಮವರ್ಗದವರು ಮತ್ತು ಇತರ ಬಳಕೆದಾರರಿಗೆ ಈ ಏರಿಕೆ ಜೀವನ ವೆಚ್ಚವನ್ನು ತೂಗಿಸಲು ವಿಪರೀತ ಕಷ್ಟವಾಗುತ್ತಿದೆ. ಇದೇ ವೇಳೆಗೆ, ಉತ್ಪಾದನಾ ವೆಚ್ಚದ ಏರಿಕೆಯನ್ನು ಭರಿಸಲು ರೈತರಿಗೆ ಪರಿಹಾರ ಬೆಲೆಯನ್ನು ಸರ್ಕಾರವು ಕೊಡದೆ, ರಾಸಾಯನಿಕ ಬೆಲೆಗಳನ್ನು ತಾನೇ ಹೆಚ್ಚಿಸಿದೆ. ಹೀಗಾಗಿ ಸರ್ಕಾರವು ಒಂದು ಕಡೆ ಬಳಕೆದಾರರು, ಮತ್ತೊಂದು ಕಡೆ ರೈತರು ಇಬ್ಬರ ಮೇಲೆಯೂ ಹಲ್ಲೆ ನಡೆಸುತ್ತಿದೆ.

ಮಹಿಳೆಯರು, ಹರಿಜನರು ಮತ್ತು ಸಮಾಜದ ಇತರ ದುರ್ಬಲ ವರ್ಗಗಳ ಮೇಲೆ ಹಲ್ಲೆಗಳು ವಿಪರೀತವಾಗುತ್ತಿರುವುದನ್ನು ಪಿ. ಬಿ. ಕಳವಳದಿಂದ ಗಮನಿಸಿತು. ಅಪರಾಧಿಗಳನ್ನು ಬಂಧಿಸಿ, ದುರ್ಬಲವರ್ಗಗಳ ಹಿತಾಸಕ್ತಿಗಳನ್ನು ರಕ್ಷಿಸುವ ಬದಲು ಸರ್ಕಾರದ ಮತ್ತು ಆಡಳಿತ ಪಕ್ಷದ ನಾಯಕರು ಅಪರಾಧಿಗಳನ್ನು ರಕ್ಷಿಸಿ, ಅವರು ಇನ್ನಷ್ಟು ಹಲ್ಲೆಗಳನ್ನು ನಡೆಸುವ ಧೈರ್ಯಮಾಡುವಂತೆ ಮಾಡುತ್ತಿದ್ದಾರೆ.

ಬೆಲೆಏರಿಕೆ, ದುರ್ಬಲವರ್ಗಗಳ

ಸಿದೆ-ಇದು ಅರಬರ ವಿರುದ್ಧ ಎಷ್ಟು ದುಷ್ಟ ಆಕ್ರಮಣವೆಂದರೆ, ಸಾಮ್ರಾಜ್ಯಶಾಹಿಗಳ ಅತಿ ಹತ್ತಿರದ ಅರಬ್‌ದೊರೆ "ಗೆಳೆಯ"ರೂ ಸಹ ಇದನ್ನು ಕಾಪಾಡಲು ಅಸಮರ್ಥರಾಗಿದ್ದಾರೆ. ಆಫ್ಘಾನಿಸ್ತಾನದ ಗಣರಾಜ್ಯದ ವಿರುದ್ಧ ಪಿತೂರಿ ಕೆಲಸಗಳನ್ನು ಮಾಡಲು ಪಾಕಿಸ್ತಾನದ ಮಿಲಿಟರಿ ಆಡಳಿತಗಾರರನ್ನೂ ತಯಾರುಮಾಡಲಾಗಿದೆ.

ಏಷ್ಯಾದ ಇನ್ನೊಂದು ಭಾಗದಲ್ಲಿ ಥಾಯ್‌ಲ್ಯಾಂಡಿನ ಪ್ರತಿಗಾಮಿ ಆಡಳಿತಗಾರರನ್ನು ವಿಯೆಟ್‌ನಾಮ್ ಮೇಲೆ ಆಕ್ರಮಣ ಮಾಡಲು ಬಳಸಿಕೊಳ್ಳಲಾಗುತ್ತಿದೆ. ಇವೆಲ್ಲವೂ ಸಾಮ್ರಾಜ್ಯಶಾಹಿ ಪ್ರವೇಶದ ಅಪಾಯವನ್ನು ಭಾರತದ ಮನೆಬಾಗಿಲಿಗೆ ತಂದು ಬಿಟ್ಟಿವೆ. ಈ ಸಾಮ್ರಾಜ್ಯಶಾಹಿ ಕೆಲಸಗಳ ವಿರುದ್ಧ ಹೋರಾಡುವುದರಲ್ಲಿ ಒಗ್ಗೂಡಬೇಕೆಂದು ದೇಶದ ಎಲ್ಲ ಸಾಮ್ರಾಜ್ಯಶಾಹಿ ವಿರೋಧಿಗಳಿಗೆ ಪಿ. ಬಿ. ಕರೆ ನೀಡುತ್ತದೆ.

ಈ ಸಾಮ್ರಾಜ್ಯಶಾಹಿ ಕೆಟ್ಟಕೆಲಸಗಳನ್ನು ಗಮನಿಸದೆ, ಚೀನದ ಜನತಾ ಗಣರಾಜ್ಯವು, ಸೋವಿಯೆತ್ ಒಕ್ಕೂಟದ ಮೇಲಿನ ತನ್ನ ದ್ವೇಷವು ಸಾಮ್ರಾಜ್ಯಶಾಹಿಗಳಿಗೆ ಅನುಕೂಲ ಮಾಡುವಂತೆ ನಡೆದುಕೊಳ್ಳುತ್ತಿರುವುದನ್ನು ಪಿ. ಬಿ. ವಿಷಾದದಿಂದ ಗಮನಿಸಿತು.

ಅಸ್ಸಾಂ ಮತ್ತು ಈಶಾನ್ಯ ವಲಯದ ಇತರ ರಾಜ್ಯಗಳು, ಕೇಂದ್ರಾಡಳಿತ ಪ್ರದೇಶಗಳ ಸಮಸ್ಯೆಗಳ ಪರಿಹಾರವು ಅಲ್ಲಿನ ಜನತೆಯ ವಿವಿಧ ವರ್ಗಗಳ ನಡುವೆ, ಸರ್ಕಾರ ಮತ್ತು ಆ ಜನತೆಯ ನಡುವೆ, ರಾಜಕೀಯ ಮಾತುಕತೆಗಳ ಮೂಲಕ ಒಪ್ಪಂದಕ್ಕೆ ಬಂದರೆ ಮಾತ್ರ ಸಾಧ್ಯವಾಗುತ್ತದೆ ಎಂದು ಸಿ. ಪಿ. ಐ. (ಎಂ) ಹಿಂದಿನಿಂದಲೂ ಅಭಿಪ್ರಾಯಪಟ್ಟಿತ್ತು.

ಚಳುವಳಿಕಾರರು ಮತ್ತು ಅಸ್ಸಾಂ ಸರ್ಕಾರದ ನಡುವೆ ಮಾತುಕತೆ ಕ್ರಮವನ್ನು ಸ್ವಾಗತಿಸುತ್ತಾ, ಭಾಷಾ, ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ನ್ಯಾಯಬದ್ಧ ಹಕ್ಕುಗಳನ್ನು ರಕ್ಷಿಸಬೇಕೆಂದು ಪಿ. ಬಿ. ತನ್ನ ಅಭಿಪ್ರಾಯವನ್ನು ಪುನರುಚ್ಚರಿಸುತ್ತದೆ. ಈಗ ಚಳುವಳಿಕಾರರು ಉಪಯೋಗಿಸಿಕೊಂಡ ಹಾಗೆ, ವಿದೇಶೀಯರ ವಿಚಾರವನ್ನು, ಅಸ್ಸಾಂನಲ್ಲಿ ನೆಲೆಸಿರುವ ಭಾರತೀಯ ಪೌರರ ಮೇಲೆ ಹಲ್ಲೆ ನಡೆಸಲು ಉಪಯೋಗಿಸಿಕೊಳ್ಳಲು ಬಿಡಬಾರದು.

ತಮ್ಮ ರಾಜ್ಯದಲ್ಲಿ ಹಾನಿಗೀಡಾದ ಜನತೆಗೆ ಪರಿಹಾರ ನೀಡಿರೆಂದು ತ್ರಿಪುರದ ಮುಖ್ಯಮಂತ್ರಿಗಳು ಮಾಡಿದ ಮನವಿಯನ್ನು ಮನ್ನಿಸಿದ ಎಲ್ಲ ಪ್ರಜಾಪ್ರಭುತ್ವವಾದಿ ಪಕ್ಷಗಳು,

ಯತ್ನಿಸಿ, ವಾಮರಂಗ ಸರ್ಕಾರವನ್ನು ವಜಾಮಾಡಿ ರಾಷ್ಟ್ರಪತಿ ಆಡಳಿತವನ್ನು ಜಾರಿ ಮಾಡುವಂತೆ ಒತ್ತಾಯಿಸಿರುವುದನ್ನೂ ಪಿ. ಬಿ. ಗಮನಿಸುತ್ತದೆ.

ನ್ಯಾಯವಾಗಿ ಆಯ್ಕೆಗೊಂಡ ಸರ್ಕಾರವನ್ನು ಉರುಳಿಸಲು, ಪಶ್ಚಿಮ ಬಂಗಾಳದಲ್ಲಿಯೂ ಸಹ ಕಾಂಗ್ರೆಸ್ ಘಟಕವು ಚಳುವಳಿಯನ್ನು ಪ್ರೇರೇಪಿಸುತ್ತಿದೆ ಎಂಬುದನ್ನು ಪಿ. ಬಿ. ಕಾಳಜಿಯಿಂದ ಗಮನಿಸುತ್ತದೆ. ವಾಮ ಮತ್ತು ಪ್ರಜಾಪ್ರಭುತ್ವವಾದಿ ಸರ್ಕಾರವನ್ನು ಉರುಳಿಸಲು, ಕೇರಳದಲ್ಲಿಯೂ ಸಹ ಕಾಂಗ್ರೆಸ್, ಆರೆಸ್ಸೆಸ್ ಜೊತೆಗೂಡಿ ಚಳುವಳಿಯನ್ನು ಉದ್ದೇಶಿಸುತ್ತಿದೆ. ಕಾಂಗ್ರೆಸ್ ಆಡಳಿತವಿರುವ ಇತರ ರಾಜ್ಯಗಳಲ್ಲಿ ಅರೆಬಿಕ್ ಮತ್ತು ಉರ್ದುವನ್ನು ಶಿಕ್ಷಣದಲ್ಲಿ ಕಲಿಸಲು ಮುಸ್ಲಿಮ್ ಅಲ್ಪಸಂಖ್ಯಾತರಿಗೆ ಅವಕಾಶ ಕೊಟ್ಟಿಲ್ಲ. ಆದರೆ ಬಿ. ಜೆ. ಪಿ. ಮತ್ತು ಇಂಡಿಯನ್ ಯೂನಿಯನ್ ಮುಸ್ಲಿಮ್ ಲೀಗ್‌ಗಳ ಆ ರಾಜ್ಯಗಳಲ್ಲಿ ಈ ಬೇಡಿಕೆ ಮುಂದಿಡದೆ ಕೇರಳದಲ್ಲಿ ಮಾತ್ರ ಅವರ ಹಕ್ಕಿಗೆ ಚ್ಯುತಿಯಾಗಿದೆಯೆಂದು ಆಪಾದಿಸಿ ಚಳುವಳಿ ಪ್ರೇರೇಪಿಸುತ್ತಿದೆ. ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಯ ಬೇಡಿಕೆಯನ್ನು ಆ ರಾಜ್ಯಗಳ ಕಾಂಗ್ರೆಸ್ ಸರ್ಕಾರಗಳು ನಿರಾಕರಿಸಿವೆ ಎಂಬುದು ಸರ್ವವಿದಿತ. ಆದ್ದರಿಂದ ಈ ಚಳುವಳಿಯು ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆಗಾಗಿ

ನೀತಿಯು ದೊಡ್ಡ ಉದ್ಯಮಿಗಳ ಚಟುವಟಿಕೆ ಕ್ಷೇತ್ರವನ್ನು ಇನ್ನಷ್ಟು ವಿಸ್ತರಿಸುತ್ತದೆ. ಆರ್ಥಿಕತೆಯ "ಉನ್ನತ ಶಿಖರಗಳನ್ನು" ಸಾರ್ವಜನಿಕ ವಲಯವೇ ಆಕ್ರಮಿಸಬೇಕೆಂದು ಕಾಂಗ್ರೆಸ್ ನಾಯಕರು ಮತ್ತು ಸರ್ಕಾರಿ ವಕ್ತಾರರು ಹೇಳುತ್ತಿದ್ದ ಮಾತುಗಳನ್ನು ಆಚರಣೆಯಲ್ಲಿ ಕೈಬಿಡಲಾಗಿದೆ. ದೊಡ್ಡ ಉದ್ಯಮಿಗಳನ್ನು ವಿರೋಧಿಸಲು ಬದ್ಧರಾಗಿರುವ ಎಲ್ಲ ಪ್ರಜಾಪ್ರಭುತ್ವವಾದಿ ರಾಜಕೀಯ ಪಕ್ಷಗಳು, ಸಾಮೂಹಿಕ ಸಂಘಟನೆಗಳು ಮತ್ತು ವ್ಯಕ್ತಿಗಳು ಸರ್ಕಾರದ ಈ ಕ್ರಮಗಳ ವಿರುದ್ಧ ದನಿಯೆತ್ತಬೇಕೆಂದು ಪಿ. ಬಿ. ಕರೆಕೊಡುತ್ತದೆ.

ಅಗತ್ಯವಸ್ತುಗಳ ಬೆಲೆಯು ವಿಪರೀತ ಏರಿರುವುದನ್ನು ಪಿ. ಬಿ.

ಮೇಲೆ ಹಲ್ಲೆ ಇವುಗಳನ್ನು ವಿರೋಧಿಸುವ ಹೋರಾಟದಲ್ಲಿ ದೇಶದ ಪ್ರಜಾಪ್ರಭುತ್ವವಾದಿ ಅಂಶಗಳು ಹೆಚ್ಚು ಹೆಚ್ಚು ಒಗ್ಗೂಡುತ್ತಿರುವುದರ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ ಪಿ. ಬಿ. ಈ ವಿಚಾರಗಳ ಬಗ್ಗೆ ಪ್ರಜಾಪ್ರಭುತ್ವವಾದಿ ಐಕ್ಯತೆಯನ್ನು ಮತ್ತಷ್ಟು ಬಲಪಡಿಸಲು ನಿರ್ಧರಿಸಿದೆ. ಹೆಚ್ಚು ಕಾರ್ಯಶೀಲರಾಗಿ, ವಿಶಾಲ ಐಕ್ಯಹೋರಾಟದ ಬೆಳವಣಿಗೆಯಲ್ಲಿ ಸಹಾಯ ಮಾಡಲು ಪಕ್ಷದ ಎಲ್ಲ ಸದಸ್ಯರಿಗೆ ಮತ್ತು ಘಟಕಗಳಿಗೆ ಪಿ. ಬಿ.ಯು ಕರೆಇತ್ತಿದೆ.

●

ರೈತ ಚಳುವಳಿಗೆ ಬೆಂಬಲ

ಉತ್ತರ ಕರ್ನಾಟಕದ ರೈತ ಚಳುವಳಿಯನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಗೋಣಿಕೊಪ್ಪಲ್ ಶಾಖೆಯು ಬೆಂಬಲಿಸಿ, ಆಳುವವರ್ಗದ ಧೋರಣೆಯನ್ನು ಖಂಡಿಸಿದೆ. ಆಗಸ್ಟ್ 15ರ ಸ್ವಾತಂತ್ರ್ಯ ದಿನವನ್ನು ಶಾಖೆಯು ಪ್ರತಿಭಟನಾ ದಿನವೆಂದು ಆಚರಿಸಿ, ರೈತರ ಪರವಾಗಿ ಘೋಷಣೆ ಕೂಗುತ್ತಾ ನಗರದಲ್ಲಿ ಮೆರವಣಿಗೆ ನಡೆಸಿತು.

ನಂತರದ ಸಭೆಯಲ್ಲಿ, ಗೋಣಿಕೊಪ್ಪಲಿನಲ್ಲಿ ಒಂದು ತಿಂಗಳಿಂದ ಜಾರಿಯಲ್ಲಿರುವ ಪೋಲೀಸ್ ಕಾಯಿದೆ 35ರ ನಿಷೇದಾಜ್ಞೆಯನ್ನು ಖಂಡಿಸಿ, "ಪೋಲೀಸ್ ರಾಜ್ಯ"ವಾಗುತ್ತಿರುವುದನ್ನು ಪ್ರತಿಭಟಿಸಲಾಯಿದೆ.

●

ಬೆಲೆಯೇರಿಕೆ ತಡೆಯಲು ಸಗಟುವ್ಯಾಪಾರ ರಾಷ್ಟ್ರೀಕರಣವೇ ಮದ್ದು

ಮಾನ್ಯ ಸಭಾಧ್ಯಕ್ಷರೆ,

ಬೆಲೆಯೇರಿಕೆ ತಡೆಗಟ್ಟಲು ಸಗಟು ವ್ಯಾಪಾರವನ್ನು ಸರ್ಕಾರವು ಕೈಗೆತ್ತಿಕೊಳ್ಳಬೇಕು ಎಂದು ನಾನು ಸದನದಲ್ಲಿ ಮಂಡಿಸಿರುವ ನಿರ್ಣಯವು ಅತ್ಯಂತ ಮಹತ್ವದೆಂದು ಹೇಳಬಯಸುತ್ತೇನೆ. ಯಾಕೆಂದರೆ ಈ ನಿರ್ಣಯವು ರಾಷ್ಟ್ರದ ಎಲ್ಲಾ ಜನ ವಿಭಾಗಗಳಿಗೂ ಸಂಬಂಧಪಟ್ಟದ್ದು. ಎಲ್ಲಾ ರಾಜಕೀಯ ಪಕ್ಷಗಳೂ ಈ ವಿಷಯದ ಕುರಿತು ಅತ್ಯಂತ ಕಾಳಜಿಯನ್ನು ಹೊಂದಿವೆ,

ಹಾವಿನ ವಿಷದಂತೆ ಏರುತ್ತಿರುವ ಹಣದುಬ್ಬರ, ಅಗತ್ಯ ವಸ್ತುಗಳ ಬೆಲೆಏರಿಕೆ ನಿಜವೇತನಗಳಲ್ಲಿ ಕಡಿತ, ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದ ಉತ್ಪನ್ನಗಳ ಬೆಲೆಯಲ್ಲಿ ದಿನೇದಿನೇ ಅಧಿಕವಾಗುತ್ತಿರುವ ಅಂತರ ಮತ್ತು ವಿತರಣೆಯ ಬಗ್ಗೆ ಒಂದು ಸುವ್ಯವಸ್ಥೆ ಮುಂತಾದ ವಿಚಾರಗಳನ್ನು ಕುರಿತು ಇಂದು ಕೇವಲ ಆರ್ಥಿಕ ತಜ್ಞರು, ಸರ್ಕಾರಿ ಅಧಿಕಾರಿಗಳು ಮಾತ್ರ ಚರ್ಚಿಸುತ್ತಿಲ್ಲ. ಬೆಲೆಏರಿಕೆ ಕುರಿತು ಪ್ರತಿ ಮನೆಯಲ್ಲೂ ಚರ್ಚೆಯಾಗುತ್ತಿದೆ, ಚುನಾವಣೆಗಳ ಸಮಯದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ಜನರ ಮುಂದೆ ಬರುತ್ತವೆ. ಬೆಲೆಗಳನ್ನು ಇಳಿಸುವುದಾಗಿಯೂ ಮತ್ತು ಅಗತ್ಯ ವಸ್ತುಗಳನ್ನು ಸಾಕಷ್ಟು ಪ್ರಮಾಣದಲ್ಲಿ ಒದಗಿಸುವುದಾಗಿಯೂ ಭರವಸೆ ಕೊಡುತ್ತವೆ. ಆದರೆ ಚುನಾವಣೆಗಳು ಕಳೆದ ತಕ್ಷಣವೇ ಬೆಲೆಗಳು ಮತ್ತೆ ಎಂದಿನಂತೆ ಏರಲು ಶುರು ಮಾಡುತ್ತವೆ. ಹೀಗೆಯೇ ಪ್ರತಿ ವರ್ಷದ ಬಜೆಟ್ಟನ್ನು ಮಂಡಿಸುವಾಗ ಪ್ರತಿಯೊಬ್ಬ ಅರ್ಥ ಮಂತ್ರಿಯೂ ತನ್ನ ಬಜೆಟ್ಟು ಬೆಲೆಗಳ ಮೇಲೆ ಯಾವ ಪರಿಣಾಮವನ್ನೂ ಉಂಟು ಮಾಡುವುದಿಲ್ಲ-ಬೆಲೆಗಳು ಏರುವುದಿಲ್ಲ ಎಂದು ಹೇಳುತ್ತಾನೆ. ಆದರೆ ಬಜೆಟ್ ಮಂಡನೆಯಾದ ಮಾರನೆಯ ದಿನದಿಂದಲೇ ಬೆಲೆಗಳು ಎಂದಿನಂತೆ ಮತ್ತೆ ಏರತೊಡಗುತ್ತವೆ. ಕಳೆದ ವರ್ಷ ಚೌದರಿಚರಣಸಿಂಗರು ಬಜೆಟ್ ಮಂಡಿಸಿದಾಗಲೂ ಹೀಗೆಯೇ ಆಗಿತ್ತು. ತನ್ನ ಬಜೆಟ್‌ನಿಂದ ಬೆಲೆಗಳು ಶೇ. 1ರಷ್ಟು ಮಾತ್ರ ಹೆಚ್ಚುತ್ತವೆ ಎಂದು ಆತ ಹೇಳಿದ. ಆದರೆ ಆತ ಬಜೆಟ್ ಮಂಡಿಸಿದ ಮೂರೇ ತಿಂಗಳಿನ ಅವಧಿಯಲ್ಲಿ ಬೆಲೆಗಳು ಶೇ. 12ರಷ್ಟು ಏರಿದವು. ಈ ವರ್ಷವೂ ಹಾಗೆಯೇ ಆಗುತ್ತಿದೆ ನೋಡಿ. ಅರ್ಥಮಂತ್ರಿ ವೆಂಕಟರಾಮನ್ ಬಜೆಟ್ ಮಂಡಿಸಿದ ಒಂದೇ ತಿಂಗಳಿನಲ್ಲಿ ಬೆಲೆಗಳು ಶೇ. 5ರಷ್ಟು ಹೆಚ್ಚಾಗಿವೆ. ಕಳೆದ 5 ತಿಂಗಳಿನಲ್ಲಿ ಬೆಲೆಗಳು ಒಟ್ಟಾರೆಯಾಗಿ ಶೇ. 11ರಷ್ಟು ಹೆಚ್ಚಾಗಿವೆ. ಆದರೂ ಬೆಲೆಗಳನ್ನು ಹತೋಟಿಗೆ ತರಲಾಗುತ್ತದೆ ಎಂಬ ಮಾತನ್ನು ಮಾತ್ರ ನಮಗೆ ಹೇಳಲಾಗುತ್ತಿದೆ. ನನ್ನ ಪಕ್ಷದ ಪತ್ರಿಕೆಯಲ್ಲಿ ಬರುವ ವಿಚಾರಗಳನ್ನು ನಾನು ಹೇಳಬಯಸುವುದಿಲ್ಲ. ಬೆಲೆಏರಿಕೆ ಬಗ್ಗೆ ಬೇರೆಬೇರೆ ಪತ್ರಿಕೆಗಳಲ್ಲಿ ಬರುತ್ತಿರುವ ಸುದ್ದಿ, ಟಿಪ್ಪಣಿ, ಸಂಪಾದಕೀಯ, ಸಮೀಕ್ಷೆಗಳನ್ನು ನೋಡಿದರೆ ಪರಿಸ್ಥಿತಿಯು ಎಂತಹ ವಿಕೋಪಕ್ಕೆ ಹೋಗುತ್ತಿದೆ ಎಂಬುದು ಗೊತ್ತಾಗುತ್ತದೆ.

ಒಂದು ಅರ್ಥದಲ್ಲಿ ಹೇಳುವುದಾದರೆ ಕಾರ್ಮಿಕರ, ಹಳ್ಳಿಯ ಬಡವರ, ರೈತರ, ಕೃಷಿಕೂಲಿಗಾರರ, ಸರ್ಕಾರಿ ನೌಕರರ, ಹಾಗೂ ಮಧ್ಯಮವರ್ಗದ ಜನಗಳ ನಿಜ ಆದಾಯ ಕಡಿಮೆಯಾಗುತ್ತಿರುವ ಬಗ್ಗೆ ಮತ್ತು ಬೆಲೆಏರಿಕೆಯ ಬಗ್ಗೆ ಬರೆಯದೆ ಇರುವ ಪತ್ರಿಕೆಗಳೇ ಇಲ್ಲ. 'ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ', 'ಎಕನಾಮಿಕ್ ಟೈಮ್ಸ್', 'ಫೈನಾನ್ಷಿಯಲ್ ಎಕ್ಸ್‌ಪ್ರೆಸ್' ಸಂತಹ ಪತ್ರಿಕೆಗಳು ಕಡೆಗೆ ಸರ್ಕಾರದ ಅರ್ಥಶಾಖೆಯೇ ನಡೆಸಿದ ಸಮೀಕ್ಷೆಗಳೂ ಸಹ ಬೆಲೆಏರಿಕೆ ತುಂಬಾ ಗಂಭೀರವಾದುದು ಎಂದು ಹೇಳುತ್ತವೆ.

ಆದರೆ ಬೆಲೆಏರಿಕೆಯು ಪ್ರಪಂಚದಾದ್ಯಂತ ಇರುವ ಒಂದು ಲಕ್ಷಣ

ಸಂಸತ್ತಿನಲ್ಲಿ ಸುರ್ಜಿತ್ ನಿರ್ಣಯ

ವಾಗಿದೆ ಎಂದು ಮಂತ್ರಿವರ್ಯರು ಮತ್ತು ಸರ್ಕಾರ ಉತ್ತರಕೊಟ್ಟು ಸುಮ್ಮನಾಗಲು ಪ್ರಯತ್ನಿಸುತ್ತಾರೆ. ಹಣದುಬ್ಬರ ಕೂಡ ಜಗತ್ತಿನಾದ್ಯಂತ ಇರುವ ಲಕ್ಷಣ ಎಂದೂ ಸಹ ನಮ್ಮ ಅರ್ಥಮಂತ್ರಿ ವೆಂಕಟರಾಮನ್ ಹೇಳತೊಡಗಿದ್ದಾರೆ. ಜಗತ್ತಿಗೇ ಅಂಟಿಕೊಂಡಿರುವ ಈ ಕಾಯಿಲೆಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ಆದರೂ ಏರುತ್ತಿರುವ ಬೆಲೆಗಳನ್ನು ತಡೆಹಿಡಿಯಲು ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದೂ ಸಹ ಅರ್ಥಮಂತ್ರಿಗಳು ಸಮಾಧಾನ ಹೇಳತೊಡಗಿದ್ದಾರೆ.

ಮಾನ್ಯ ಸಭಾಧ್ಯಕ್ಷರೆ,

ಹಣದುಬ್ಬರವು ಇಡೀ ಪ್ರಪಂಚಕ್ಕೇ ಅಂಟಿರುವ ಕಾಯಿಲೆ ಎಂಬುದನ್ನು ನಾನು ಒಪ್ಪುವುದಿಲ್ಲ ಸ್ವಾಮಿ. ಬಂಡವಾಳಶಾಹಿ ಜಗತ್ತು ಈ ಕಾಯಿಲೆಯಿಂದ ನರಳುತ್ತಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ ಆದರೆ ಸಮಾಜವಾದಿ ಜಗತ್ತು ಎಂಬ ಜಗತ್ತೊಂದಿದೆ ಸ್ವಾಮಿ ಇಲ್ಲಿ ಹಣದುಬ್ಬರ ತಲೆಯೇ ಹಾಕುವುದಿಲ್ಲ. ಬೆಲೆಏರಿಕೆ ಎಂದರೇನೆಂಬುದೇ ಈ ಜಗತ್ತಿಗೆ ಗೊತ್ತಿಲ್ಲ. ಬೆಲೆಗಳು ಯಾವಾಗಲೂ ಒಂದೇ ಮಟ್ಟದಲ್ಲಿ ಇರುತ್ತವೆ ಇಲ್ಲಿ, ಜನರ ಜೀವನಮಟ್ಟವು ಇಲ್ಲಿ ಸದಾ ಮೇಲಕ್ಕೆ ಹೋಗುತ್ತಿರುತ್ತದೆ. ಉದ್ಯೋಗವಿಲ್ಲದ ಒಬ್ಬನೇ ಒಬ್ಬ ಪ್ರಜೆಯೂ ಈ ಜಗತ್ತಿನಲ್ಲಿ ಇಲ್ಲ ಆದ್ದರಿಂದ ನೀವು ಮಾತನಾಡುವಾಗ ಬರೀ ಬಂಡವಾಳಶಾಹಿ ಜಗತ್ತನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾತನಾಡುತ್ತೀರಿ ಸ್ವಾಮಿ. ಇದರ ಬಗ್ಗೆ ಬಂಡವಾಳಶಾಹಿ ಜಗತ್ತಿಗೂ ಹೆಮ್ಮೆ ಇದೆ ಎಂದೆನಿಸುತ್ತದೆ.

ಬಂಡವಾಳಶಾಹಿ ರಾಷ್ಟ್ರಗಳೊಡನೆ ಮತ್ತು ಸಮಾಜವಾದಿ ದೇಶಗಳೊಡನೆ ನಮ್ಮ ದೇಶವು ಇಟ್ಟುಕೊಂಡಿರುವ ವ್ಯಾಪಾರಿ ಸಂಬಂಧಗಳನ್ನು ಕುರಿತು ಈ ದಿನ ತಾನೆ ಓರ್ವ ಅಮೆರಿಕನ್ ಪ್ರಜೆ ಒಂದು ಲೇಖನ ಬರೆದಿದ್ದಾನೆ, ಅದರಲ್ಲಿ ಆತ ಏನು ಹೇಳುತ್ತಾನೆ ಗೊತ್ತಾ ಸ್ವಾಮಿ? ನಮ್ಮದು ಒಂದು ಭಾಗ ಸಮಾಜವಾದಿ ದೇಶಗಳೊಡನೆ ವ್ಯಾಪಾರಿ ಸಂಬಂಧವಿದ್ದರೆ ನಾಲ್ಕು ಭಾಗ ಬಂಡವಾಳಶಾಹಿ ದೇಶಗಳೊಡನಂತೆ. ಆದ್ದರಿಂದ ಬೆಲೆಏರಿಕೆಯು ಜಗತ್ತಿನ ತುಂಬೆಲ್ಲಾ ಇರುವ ಕಾಯಿಲೆ ಎಂದು ಹೇಳುತ್ತಾ ಹೊರಟರೆ ನಾವು ಬೆಲೆಏರಿಕೆಗೆ ಒಂದು ಮುಖವಾಡ ಕೊಟ್ಟು ಅದರಿಂದ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತೇವೆಯೇ ಹೊರತು ಬೆಲೆಗಳನ್ನು ಹಿಡಿತದಲ್ಲಿಡಲು ಯಾವ ಪ್ರಯತ್ನವನ್ನೂ ಮಾಡಿದಂತಾಗುವುದಿಲ್ಲ.

ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿರುವ ಸಾಮಾನ್ಯ ಮನುಷ್ಯನೊಬ್ಬನ ಕಥೆಯನ್ನು "ಟೈಂಸ್ ಆಫ್ ಇಂಡಿಯಾ" ಪತ್ರಿಕೆಯು ವರದಿ ಮಾಡಿರುವುದನ್ನು ಇಲ್ಲಿ ಉಲ್ಲೇಖಿಸಬಯಸುತ್ತೇನೆ.

ಸಾರ್ವಜನಿಕ ಕ್ಷೇತ್ರದ ಉದ್ದಿಮೆಯೊಂದರ ಅತಿಥಿ ಗೃಹವೊಂದರಲ್ಲಿ ಚೌಕಿದಾರನಾಗಿ ದುಡಿಯುತ್ತಿರುವವನು ಶ್ರೀ ಲಾಲ್‌ಬಹಾದ್ದೂರ್. ಈತನಿಗೆ ಆತನ ಕಂಪೆನಿ ಯಾವ ವಸತಿ ಸೌಕರ್ಯವನ್ನೂ ಒದಗಿಸಿಕೊಟ್ಟಿಲ್ಲ ಮದುವೆ ಮಾಡಿಕೊಂಡ ನಂತರ ಈತನಿಗೆ ಬಂದ ಮಡದಿ ಹಾಗೂ ಎರಡು ಮಕ್ಕಳಿಗೆ ಈತ ಮನೆಯನ್ನು ಹೊಂಚಲೇಬೇಕಾಯಿತು. ಬಹುಪ್ರಯಾಸದ ನಂತರ ಜಫ್ರಾಬಾದ್‌ಪುರದಲ್ಲಿ ಈತನಿಗೆ 10 ಅಡಿ ಅಗಲ ಹಾಗೂ 12 ಅಡಿ ಉದ್ದದ ಒಂದು ಕೊಠಡಿ ಸಿಕ್ಕಿತು. ಅದಕ್ಕೆ ನೂರಹತ್ತು ರೂಗಳ ಬಾಡಿಗೆ! ಹೌದು ಆ ಕೊಠಡಿಗೆ ಒಂದು ವಿದ್ಯುತ್ ದೀಪ ಇತ್ತು. ವಿದ್ಯುತ್ ಖರ್ಚನ್ನು ಈತನೇನೂ ಕೊಡಬೇಕಾಗಿಲ್ಲ. ಆದರೆ ಇವನ ವಠಾರದಲ್ಲಿರುವ ಇತರ ಹತ್ತು ಸಂಸಾರಗಳಿಗೆ ಮತ್ತು ಈತನಿಗೆ ಇರುವುದು ಒಂದೇ ಒಂದು ಸ್ನಾನದ ಮನೆ ಮತ್ತು ಕಕ್ಕಸ್ಸು. ಭತ್ಯವೂ ಸೇರಿದಂತೆ ಈ ಚೌಕಿದಾರನ ಒಟ್ಟು ಸಂಬಳ ತಿಂಗಳಿಗೆ 400ರೂಗಳು. ಪ್ರಾವಿಡೆಂಟ್ ಮುರಿದುಕೊಂಡನಂತರ ಈತನಿಗೆ ಕೊಡುವುದು ಕೇವಲ 385ರೂಗಳು ಮಾತ್ರ. 385ರೂನಲ್ಲಿ ಈತ 110ರೂ ಬಾಡಿಗೆ ಕೊಡಬೇಕಾಗಿದೆ. ಇಷ್ಟೊಂದು ಬಾಡಿಗೆ ಕೊಡಲು ಅಸಾಧ್ಯವಾಗಿ ಈ ಚೌಕಿದಾರನ ಹೆಂಡತಿಯೂ ಒಂದು ಕೆಲಸಕ್ಕೆ ಸೇರಿದಳು ಆಕೆಯ ಮಾಲೀಕರು ಆಕೆಯ ಕೂಲಿಯಾಗಿ ಒಂದು ಚಿಕ್ಕ ಮನೆಯನ್ನು ಆಕೆಗೆ ನೀಡಿದರು. ಮನೆ ಸಿಕ್ಕಿದ್ದರಿಂದ ಚೌಕಿದಾರನ ಸಂಸಾರ ಜಫ್ರಾಬಾದ್‌ಪುರವನ್ನು ಬಿಡಬೇಕಾಯಿತು. ಬಿಟ್ಟರು ಕೂಡ. 385ರೂಗಳಷ್ಟು ಆದಾಯವಿರುವ ಈ ಸಂಸಾರದ ಬಜೆಟ್ಟಿನ ಬಹುಪಾಲುಹಣ ಆಹಾರಕ್ಕೆ ಖರ್ಚಾಗುತ್ತದೆ. 12 ವರ್ಷದ ಮಗ ಮತ್ತು 3 ವರ್ಷದ ಮಗಳಿರುವ ಈ ಸಂಸಾರಕ್ಕೆ ದಿನವೊಂದಕ್ಕೆ ಒಂದು ಲೀಟರ್‌ನಷ್ಟು ಹಾಲು ಕೊಳ್ಳಲಾಗುತ್ತದೆ. ಒಂದು ಲೀಟರ್ ಹಾಲಿಗೆ 2ರೂ 20 ಪೈಸೆಯಂತೆ ತಿಂಗಳ ಖರ್ಚು 66ರೂ ಆಗುತ್ತದೆ. 60ರೂ ತರಕಾರಿಗೆ ಹೋಗುತ್ತದೆ. 60ರೂಗಳಷ್ಟು ಬೇಳೆ ಕಾಳಿಗೆ ಖರ್ಚಾಗುತ್ತದೆ. ನಾಲ್ವರ ಸಂಸಾರಕ್ಕೆ ಗೋಧಿಹಿಟ್ಟು ಮತ್ತು ಅಕ್ಕಿಗಾಗಿ 100ರೂಗಳು ಖರ್ಚಾಗುತ್ತದೆ. (ಗೋಧಿಹಿಟ್ಟು ಮತ್ತು ಅಕ್ಕಿಯನ್ನು ಇವರು ರೇಶನ್ ಶಾಪ್‌ನಿಂದ ಕೊಳ್ಳುತ್ತಾರೆ) ಅಡಿಗೆಗೆ ಸೀಮೆ ಎಣ್ಣೆಗಾಗಿ 90ರೂಗಳು ಖರ್ಚಾಗುತ್ತದೆ. ಅಡಿಗೆಎಣ್ಣೆ 13ರೂ. ಕೆ.ಜಿ. ಇದೆ. ಇವರ ಮನೆಗೆ 2ಕೆ.ಜಿ. ಎಣ್ಣೆ ಎಂದರೂ 26ರೂ ಬೇಕು. ಅತ್ಯಂತ ಅಗ್ಗವಾದ ಮೈಸಾಬೂನಿನ ಬೆಲೆ 1.ರೂ 70ಪೈಸೆ. ಇವರಿಗೆ ಎರಡು ಬಿಲ್ಲೆ ಸಾಬೂನಿಗೆ 2ರೂ 40ಪೈಸೆ ಖರ್ಚಾಗುತ್ತದೆ. ಆದಾಯ 385ರೂ. ಇದ್ದು ಖರ್ಚು 398ರೂಗಳಷ್ಟಾಗುವ ಇವರು ಬಟ್ಟೆ ಬರೆಗಳನ್ನು ಕೊಳ್ಳುವುದು ಹೇಗೆ? ಕಷ್ಟಕಾಲಕ್ಕೆ ಬರಲೆಂದು ಉಳಿಸುವುದಾದರೂ ಏನನ್ನು? ಇವರ ಮಕ್ಕಳ ವಿದ್ಯಾಭ್ಯಾಸವೆಂತು? ಪ್ರತಿತಿಂಗಳ ಮನೆ ಖರ್ಚನ್ನೇ ನಿಭಾಯಿಸಲು ಪ್ರತಿ ತಿಂಗಳೂ ಸಾಲ ಮಾಡಬೇಕಾದ ಪರಿಸ್ಥಿತಿ ಇರುವ ಈ ಚೌಕಿದಾರನ ಸಂಸಾರಕ್ಕೆ ಆರೋಗ್ಯ, ಔಷಧ, ಮಕ್ಕಳ ವಿದ್ಯಾಭ್ಯಾಸ ಕನಸಿನ ಮಾತುಗಳೇ ಸರಿ.

ಹೀಗೆ ಬೆಲೆ ಏರಿಕೆಯ ಬಗ್ಗೆ ಎಲ್ಲಾ ಪತ್ರಿಕೆಗಳೂ ಆಗಿಂದಾಗ್ಗೆ ಬರೆಯುತ್ತಲೇ ಇವೆ, ಬೆಲೆ ಏರಿಕೆಯು ಜಾಗತಿಕ ಕಾಯಿಲೆ ಎಂಬ ಉತ್ತರ ಕೊಡುವುದೊಂದನ್ನು ಬಿಟ್ಟು ಸರ್ಕಾರ ಏನನ್ನೂ ಮಾಡುತ್ತಿಲ್ಲ.

ಇಷ್ಟೆಲ್ಲದರ ಮೇಲೆ ರೂಪಾಯಿಯ ಕೊಳ್ಳುವ ಸಾಮರ್ಥ್ಯ ಕಡಿಮೆಯಾಗುತ್ತಿರುವುದು ಬೇರೆ. ಇಂದು ಒಂದು ರೂಪಾಯಿಯ ಕೊಳ್ಳುವ ಸಾಮರ್ಥ್ಯ ಕೇವಲ 19 ಪೈಸೆಗಳಷ್ಟು ಮಾತ್ರ. ಹೀಗೆ ಹದಗೆಡುತ್ತಿರುವ ಈ ಪರಿಸ್ಥಿತಿಯಲ್ಲಿ ಪರಿಣಾಮಕಾರಿಯಾದ ಯಾವ ಕ್ರಮಗಳನ್ನೂ ತೆಗೆದುಕೊಳ್ಳದ ಸರ್ಕಾರವು; 'ಮಾರಾಟಗಾರರಿಗೆ ಬೆಲೆಪಟ್ಟಿಯನ್ನು ಪ್ರದರ್ಶಿಸಿ ಎಂದು ಹೇಳಲಾಗುವುದು', 'ಆದಷ್ಟು ಬೇಗನೆ ಕಠಿಣ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು' ಎಂಬ ಹಾರಿಕೆಯ ಉತ್ತರ ಕೊಡುತ್ತಿದೆ.

ಪೆಟ್ರೋಲಿಯಂ ಉತ್ಪನ್ನಗಳ, ರಾಸಾಯನಿಕ ಗೊಬ್ಬರಗಳ ಬೆಲೆಗಳು ಮಾತ್ರ ಏರಿವೆ ಎಂದು ಅರ್ಥಮಂತ್ರಿಗಳು ಹೇಳುತ್ತಾರೆ. ಮತ್ತು ಬೆಲೆಗಳ ಸಮತೋಲನ ಕೂಡ ಮಾಡಲಾಗುತ್ತದೆ ಎಂದೂ ಅವರು ಹೇಳುತ್ತಾರೆ, ಬಳಕೆದಾರರ ವಸ್ತುಗಳಲ್ಲಿ ಕೇವಲ ಶೇ. 10ರಷ್ಟು ಮಾತ್ರ ಬೆಲೆಗಳು ಏರಿವೆ ಎಂದು ಆರಾಮವಾಗಿ ಹೇಳುವ ಅರ್ಥಸಚಿವರ ಸಮಾಧಾನ ಸ್ಥಿತಿಯನ್ನು ನೋಡಿ. ಬೆಲೆ ಏರಿಕೆಯಂಥ ಗಂಭೀರ ವಿಚಾರವನ್ನು ಅವರು ಯೋಚಿಸುವ ಕ್ರಮ ಹೇಗಿದೆ ನೋಡಿ. ಬೆಲೆಗಳನ್ನು ಇಳಿಸುವ ಬಗ್ಗೆ ಅವರಿಂದ ಮಾತೇ ಹೊರಡುತ್ತಿಲ್ಲ. ಬೆಲೆಗಳನ್ನು ಹತೋಟಿಯಲ್ಲಿಡುವುದು ಅಥವ ಸಮತೋಲನ ಮಾಡುವ ಮಾತುಗಳೇ ಅರ್ಥ ಮಂತ್ರಿಗಳ ಬಾಯಿಂದ ಕೇಳಿ ಬರುತ್ತಿವೆ. ಈ ಮಾತುಗಳ ಅರ್ಥವು ಏನೆಂದು ನಮಗೆ ತಿಳಿಯುತ್ತಿಲ್ಲ. ಬೆಲೆಗಳನ್ನು ಇಳಿಸಲಾಗುವುದು ಎಂದು ಯಾರೊಬ್ಬರೂ ಹೇಳುತ್ತಿಲ್ಲ. ಎಲ್ಲವನ್ನೂ ಸಮರ್ಥಿಸಿಕೊಳ್ಳುತ್ತಿರುವುದೇ ಇಂದು ಎಲ್ಲಾ ಕಡೆ ಕಾಣಿಸುತ್ತಿದೆ. ಸಕ್ಕರೆಯ ವ್ಯಾಪಾರವನ್ನು ಸರ್ಕಾರ ವಹಿಸಿಕೊಂಡು ಸಾರ್ವಜನಿಕ ವಿತರಣಾ ಪದ್ಧತಿಯಿಂದ ವಿತರಣೆ ಮಾಡಿ ಎಂದು ನಾವು ಹೇಳಿದರೆ ಸರ್ಕಾರ ಏನು ಹೇಳುತ್ತದೆ ಗೊತ್ತಾ? "ನಾವು ಹಾಗೆ ಮಾಡಲಾರೆವು. ಯಾಕೆಂದರೆ ಉತ್ಪಾದನಾ ಖರ್ಚಿಗಿಂತ ಕಡಿಮೆ ಬೆಲೆಗೆ ಸಕ್ಕರೆಯು ಸರ್ಕಾರಕ್ಕೆ ಸಿಕ್ಕುತ್ತಿದೆ" ಎಂಬುದಾಗಿ ಸರ್ಕಾರ ಹೇಳುತ್ತದೆ. ಆದ್ದರಿಂದ ನಷ್ಟಕ್ಕೆ ಮಾರುವ ಉತ್ಪಾದಕರು ನಷ್ಟ ತುಂಬಿಕೊಳ್ಳಲೆಂದು ಸರ್ಕಾರವು ಅವರನ್ನು ಬಿಟ್ಟುಬಿಟ್ಟಿದೆ. ಸರ್ಕಾರಕ್ಕೆ ಕೊಡುವ ಲೆವಿ ಸಕ್ಕರೆಯಲ್ಲಿ ಆದ ನಷ್ಟ

ವನ್ನು ತುಂಬಿಕೊಳ್ಳಲು ಉತ್ಪಾದಕರಿಗೆ ಸ್ವಾತಂತ್ರ್ಯ ಕೊಡುವುದೆಂದರೆ ಅವರು ಜನತೆಯನ್ನು ಎಷ್ಟು ಬೇಕಾದರೂ ಲೂಟಿ ಹೊಡೆಯಬಹುದು ಎಂಬುದು ಸರ್ಕಾರವೇ ಪಾಲಿಸುತ್ತಿರುವ ನೀತಿ ನ್ಯಾಯಬೆಲೆ ಅಂಗಡಿಗಳ ಮೂಲಕ ನಾವು ಬಳಕೆದಾರರ ಸೇವೆ ಮಾಡುತ್ತಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಈ ನ್ಯಾಯ ಬೆಲೆಯ ಅಂಗಡಿಗಳು ನಮ್ಮ ದೇಶದ ಯಾವ ಗ್ರಾಮಗಳಲ್ಲಿ ಇವೆ? ಇದ್ದರೂ ಆ ಅಂಗಡಿಗಳಲ್ಲಿ ಸಕ್ಕರೆಯಾಗಲೀ ಅಥವ ಬೇರಾವ ಅವಶ್ಯಕ ಸಾಮಗ್ರಿಗಳು ಇವೆ? ಬೆಲ್ಲದ ಬೆಲೆ ಕೂಡ ಈಗ ಕಿ.ಜಿ.ಗೆ 5ರೂಗಳಷ್ಟಾಗಿದೆ. ಹೀಗೇಕೆ ಎಂದು ಕೇಳಿದರೆ "ಪಾಕೀಸ್ತಾನದಲ್ಲಿ ಮತ್ತು ಬಂಗ್ಲಾದೇಶದಲ್ಲಿ ಇದಕ್ಕಿಂತ ಹೆಚ್ಚು ಬೆಲೆ" ಎಂಬ ಉತ್ತರವನ್ನು ಸರ್ಕಾರ ಕೊಡುತ್ತದೆ. ಬಹುಶಃ ಬಂಗ್ಲಾ-ಪಾಕಿಸ್ತಾನಗಳಲ್ಲಿರುವ ಬೆಲೆಯ ಮಟ್ಟಕ್ಕೆ ಬೆಲ್ಲದ ಬೆಲೆಯನ್ನು ಏರಿಸಿ ನಂತರ ಅದನ್ನು ಹತೋಟಿಗೆ ತರುವುದು ಸರ್ಕಾರದ ಉದ್ದೇಶವಿರುವಂತಿದೆ. (ಆಡಳಿತ ಸದಸ್ಯರಿಂದ ಗದ್ದಲ)

ಮಂತ್ರಿಗಳು ಹೇಳುವ ಹಾಗೆ ಬರೀ ಎರಡು ಮೂರು ಪದಾರ್ಥಗಳ ಬೆಲೆಗಳು ಮಾತ್ರ ಹೆಚ್ಚಿಲ್ಲ. ಬಹಿರಂಗ ಮಾರುಕಟ್ಟೆಯಲ್ಲಿ ಅನೇಕ ಪದಾರ್ಥಗಳೇ ಇಲ್ಲ. ಉದಾಹರಣೆಗೆ ಸಿಮೆಂಟು. ಆದರೆ ಕಳ್ಳಸಂತೆಯಲ್ಲಿ ಚೀಲವೊಂದಕ್ಕೆ 80-85ರೂಗಳನ್ನು ಕೊಟ್ಟರೆ ಬೇಕಾದಷ್ಟು ಸಿಮೆಂಟು ಸಿಗುತ್ತದೆ. ಹೀಗೆ ಕಳ್ಳಪೇಟೆಯಲ್ಲಿ ಬೇಕಾದಷ್ಟು ಸಿಕ್ಕುವ ಅನೇಕ ಪದಾರ್ಥಗಳಿವೆ. ಕಳೆದ ವರ್ಷ ಕ್ವಿಂಟಾಲ್‌ವೊಂದಕ್ಕೆ 790ರೂಗಳಿದ್ದ ಕಡಲೇ ಬೀಜ ಈ ವರ್ಷ 1050ರೂಗಳಾಗಿರುವ ಬಗ್ಗೆ 'ದಿ ಹಿಂದೂ' ಪತ್ರಿಕೆ ಬರೆದಿದೆ. ಬೊಂಬಾಯಿ ಮಾರುಕಟ್ಟೆಯಲ್ಲಿ 16 ಕಿ.ಜಿಯ ಕೊಬ್ಬರಿ ಎಣ್ಣೆ ಡಬ್ಬವೊಂದಕ್ಕೆ 203 ರೂ ಇದ್ದದ್ದು ಈಗ 303 ರೂ. ಆಗಿದೆ. ವನಸ್ಪತಿಯ ಬೆಲೆ 750 ರೂ.ಗಳಿಂದ 1200ಕ್ಕೆ ಬಂದು ತಲುಪಿದೆ. ಬೆಲೆಏರಿಕೆಯ ಪರಿಸ್ಥಿತಿ ಇದು ಸ್ವಾಮಿ. ಮಂತ್ರಿಗಳು ಹೇಳಿದ ಹಾಗೆ ಬೆಲೆ ಏರಿಕೆಯು ಕೇವಲ ಪೆಟ್ರೋಲಿಯಂ ಉತ್ಪನ್ನಗಳಿಗೆ ಮತ್ತು ರಾಸಾಯನಿಕ ಗೊಬ್ಬರಗಳಿಗೆ ಮಾತ್ರ ಸೀಮಿತವಾಗಿಲ್ಲ. ಬೆಲೆಏರುತ್ತಿರುವುದರ ಪರಿಣಾಮವು ಮುಂದೆ ನಿಮಗೆ ಗೊತ್ತಾಗಲಿದೆ. ಸಾರಿಗೆ ದರವನ್ನು ಹೆಚ್ಚಿಸಲು ಈಗಾಗಲೇ ರಾಜ್ಯಸರಕಾರಗಳು ಶುರು ಮಾಡಿವೆ. ಇದರ ಪರಿಣಾಮ ಹೇಗಾದೀತು ಎಂಬುದನ್ನು ಇನ್ನೂ ಕಾದು ನೋಡಬೇಕಾಗಿದೆ.

ಸ್ವಾಮಿ, ನಾನು ಹೆಚ್ಚು ಆಳಕ್ಕೆ ಹೋಗ ಬಯಸುವುದಿಲ್ಲ. ಯಾಕೆಂದರೆ ಏರುತ್ತಿರುವ ಬೆಲೆಗಳ ಬಗ್ಗೆ ಎಲ್ಲರಿಗೂ ಗೊತ್ತಿದೆ. ಇದರ ಬಗ್ಗೆ ಎಲ್ಲಾ ವೃತ್ತಪತ್ರಿಕೆಗಳೂ ಬರೆಯುತ್ತಿವೆ. ಆದ್ದರಿಂದ ವಿವರಗಳಿಗೆ ನಾನು ಹೋಗುವುದಿಲ್ಲ. ಆದರೆ ನಾನು ಏನನ್ನು ಕೇಳಬಯಸುತ್ತೇನೆಂದರೆ......ಈ ಹಣದುಬ್ಬರದಿಂದ ಯಾರಿಗೆ ಪ್ರಯೋಜನವಾಗುತ್ತದೆ? ಇದರ ಲಾಭ ಪಡೆಯುವವರು ದೊಡ್ಡ ವ್ಯಾಪಾರಿ ಮನೆತನಗಳು, ಸಟ್ಟಾ ವ್ಯಾಪಾರಿಗಳು ಮತ್ತು ಜಮೀನುದಾರರು.

ಈ ಬೆಲೆ ಏರಿಕೆಯಿಂದ ಅತ್ಯಂತ ಕಷ್ಟವನ್ನು ಅನುಭವಿಸುತ್ತಿರುವವರು ನಮ್ಮ ಬೇಸಾಯ ಕೂಲಿಗಾರರು, ಕೈಗಾರಿಕಾ ಕಾರ್ಮಿಕರು, ಸರ್ಕಾರಿ ಸೇವಕರು, ನಿರುದ್ಯೋಗಿಗಳು ಮತ್ತು ಅರೆ ನಿರುದ್ಯೋಗಿಗಳು. ಹಣದುಬ್ಬರಕ್ಕೆ ಹೋಲಿಸಿ ನೋಡಿದಾಗ ವೇತನಗಳು ಸಾಮಾನ್ಯವಾಗಿ ತುಂಬಾ ಹಿಂದೆ ಬಿದ್ದಿರುತ್ತವೆ. ಕಡಿಮೆ ವೇತನಗಳಿಂದ ಅಪಾರ ಲಾಭವಾಗುವುದು ಕೈಗಾರಿಕೋದ್ಯಮಿಗಳಿಗೆ ಮತ್ತು ಬಂಡವಾಳಗಾರರಿಗೆ. ಅಸಂಘಟಿತ ವಿಭಾಗದಲ್ಲಿ ಈ ಪರಿಸ್ಥಿತಿ ಇನ್ನೂ ಹಾಳಾದ ಸ್ಥಿತಿಯಲ್ಲಿದೆ. ಯೋಜನಾ ಇಲಾಖೆ ಹೇಳಿರುವ ಪ್ರಕಾರವೇ 1977-78ರ ಆರ್ಥಿಕ ವರ್ಷದಲ್ಲಿ ಬಡತನದ ರೇಖೆಗಿಂತ ಕೆಳಗೆ ಬದುಕುತ್ತಿರುವವರ ಸಂಖ್ಯೆ ಶೇ.40ರಿಂದ ಶೇ.60ರಷ್ಟಿದೆ. ಅಂದರೆ 600ಮಿಲಿಯ ಜನರಲ್ಲಿ 300ಮಿಲಿಯ ಜನರು ದಟ್ಟ ದಾರಿದ್ರ್ಯದಲ್ಲಿ ಬಾಳುತ್ತಿದ್ದಾರೆ ಎಂಬುದಾಗಿ ಯೋಜನಾ ಇಲಾಖೆ ಹೇಳಿರುವುದನ್ನೇ ನಾನು ಇಲ್ಲಿ ಪ್ರಸ್ತಾಪಿಸುತ್ತಿದ್ದೇನೆ. ಇದೇ ಆರ್ಥಿಕ ವರ್ಷದಲ್ಲಿ ರಾಷ್ಟ್ರದ 20 ಮನೆತನಗಳ ಆಸ್ತಿಯು ಅನೇಕ ಪಟ್ಟು ಹೆಚ್ಚಿರುವುದನ್ನೂ ಸರಕಾರವೇ ಒಪ್ಪಿಕೊಂಡಿದೆ. ಈ ಮನೆಗಳ ಒಟ್ಟು ಆಸ್ತಿಯು 1972-73ರಲ್ಲಿ 3576ಕೋಟಿರೂ. ಇದ್ದದ್ದು 1975 76ರಲ್ಲಿ 4966ಕೋಟಿ ರೂಗಳಿಗೆ ಹೆಚ್ಚಿತು. ಅಂದರೆ ಈ ಮನೆಗಳ ಲಾಭವು ಶೇ.40.6ರಷ್ಟು ಹೆಚ್ಚಿದಂತಾಯಿತು. ಭಾರಿ ಜಮೀನ್ದಾರರು ಬಂಡವಾಳಗಾರರು, ವಿದೇಶಿ ಬಂಡವಾಳಗಾರರು ಈ ಲೂಟಿಯ ಪಾಲುದಾರರಾದರು. ಶೇ.60ರಷ್ಟು ಜನರನ್ನು ಬಡತನದ ರೇಖೆಗಿಂತ ಕೆಳಗೆ ದೂಡಿದರು. ಬೆಲೆ ಏರಿಕೆಯಿಂದಾಗಿ ಯಾರಿಗೆ ಅಪಾರ ಲಾಭವಾಯಿತು ಮತ್ತು ಯಾರು ಸಂಕಷ್ಟಕ್ಕೆ ಒಳಗಾದರು ಎಂಬ ಸ್ಪಷ್ಟ ಚಿತ್ರವನ್ನು ಈ ಮೇಲಿನ ಅಂಕಿ ಅಂಶಗಳು ಹೇಳುತ್ತವೆ.

ಕೈಗಾರಿಕಾ ಕಾರ್ಮಿಕರ, ಸಂಬಳದಾರರ ವೇತನಗಳೆಡೆಗೆ ಈಗ ನೋಡೋಣ, ಸಾರ್ವಜನಿಕ ಕ್ಷೇತ್ರದ ಉದ್ದಿಮೆಗಳೂ ಸೇರಿದಂತೆ ಈ ಎಲ್ಲ ವಿಭಾಗಗಳ ದುಡಿಯುವ ಜನತೆಯ ಆದಾಯವು ತೀರಾ ಕಡಿಮೆ ಇದೆ. ಗಣಿಗಳಲ್ಲಿ ಕೆಲಸ ಮಾಡುವ ಕಾರ್ಮಿಕರ ಕೂಲಿಯಂತೂ ಅತ್ಯಂತ ಕಡಿಮೆ. ಅಲ್ಲಿ ದುಡಿಯುವ ಸಾಮಾನ್ಯ ಕೂಲಿಗೆ ದಿನವೊಂದಕ್ಕೆ 5ರೂ 80ಪೈಸೆ. ಅರೆ ನುರಿತ ಕೂಲಿಗಾರನಿಗೆ 7-25ಪೈಸೆ ಮತ್ತು ನುರಿತ ಕೂಲಿಗಾರನಿಗೆ 8-35ಪೈಸೆ ಕೊಡಲಾಗುತ್ತಿದೆ. ಈ ಕೂಲಿಯನ್ನು ಪಡೆದು ಓರ್ವ ಕೂಲಿಗಾರನ ಸಂಸಾರ ಬದುಕಲು ಸಾಧ್ಯವೆ? ಎಲ್ಲಾ ಗಣಿ ಕಾರ್ಮಿಕರ ಪರಿಸ್ಥಿತಿ ಇದೇ ಆಗಿದೆ.

ಬೆಲೆಏರಿಕೆಯಿಂದಾಗಿ ಈ ಕೂಲಿ ಹಣದ ಕೊಳ್ಳುವ ಶಕ್ತಿಯು ಮತ್ತಷ್ಟು ಕಡಿಮೆಯಾಗುತ್ತಿದೆ. ಅಸಂಘಟಿತ ವಿಭಾಗದಲ್ಲಿ ದುಡಿಯುತ್ತಿರುವ ಕೂಲಿಗಾರರ ಕಷ್ಟಗಳನ್ನು ಕೇಳುವವರೇ ಇಲ್ಲ, ನನಗೆ ಸಭಾಧ್ಯಕ್ಷರು ಕೊಟ್ಟಿರುವ ಅಲ್ಪ ಸಮಯದಲ್ಲಿ ನಾನು ಎಲ್ಲವನ್ನು ಹೇಳಲು ಸಾಧ್ಯವಾಗುತ್ತಿಲ್ಲ. ಆದರೆ ನಾನೊಂದು ವಿಷಯ ಹೇಳಬಯಸುತ್ತೇನೆ. ಅದೆಂದರೆ ಕೈಗಾರಿಕಾ ಹಾಗೂ ಕೃಷಿ ಉತ್ಪನ್ನಗಳ ಬೆಲೆಗಳಲ್ಲಿ ಅಪಾರ ಅಂತರವಿರುವುದು. ಕೃಷಿ ಉತ್ಪನ್ನಗಳ ಉತ್ಪಾದನಾ ವೆಚ್ಚ ಹೆಚ್ಚಾಗುತ್ತಿರುವುದನ್ನು ಭರಿಸಲು ರೈತರ ಉತ್ಪನ್ನಗಳಿಗೆ ಸರಿಯಾದ ಬೆಂಬಲ ಬೆಲೆಯನ್ನು ಸರ್ಕಾರವು ನಿಗದಿಪಡಿಸುತ್ತಿಲ್ಲ. ಕೃಷಿ ಉತ್ಪಾದನೆಯಲ್ಲಿ ಆಗುವ ಹೆಚ್ಚಿನ ಖರ್ಚನ್ನು ತುಂಬಿಕೊಡಲು ಕ್ರಮಕೈಗೊಳ್ಳಲಾಗುವುದು ಎಂದು ಸಚಿವರು ಕೆಲವು ದಿವಸಗಳ ಹಿಂದೆಯಷ್ಟೇ ಹೇಳಿದ್ದರು. ಆದರೆ ಅವರು ಹಾಗೆ ಜಾರಿಮಾಡವಾಗ ಮಾತ್ರ ಹಿಂದೆ ಬೀಳುತ್ತಾರೆ. ಭತ್ತದ ಬೆಲೆಯನ್ನು ನಿಗದಿಪಡಿಸಿರುವ ವಿಷಯವನ್ನೇ ನೋಡಿ. ರಾಸಾಯನಿಕ ಗೊಬ್ಬರಗಳ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯನ್ನು ವಿಪರೀತ ಹೆಚ್ಚಿಸಿರುವ ಸರ್ಕಾರವೇ ಭತ್ತದ ಬೆಲೆಯನ್ನು ಕ್ವಿಂಟಾಲ್‌ವೊಂದಕ್ಕೆ 95 ರೂ.ನಿಂದ 100ರೂ ಗಳಿಗೆ ಮಾತ್ರ ಹೆಚ್ಚಿಸಿದೆ. ಅಂದರೆ ರೈತರಿಗೆ ಈ ಸರ್ಕಾರ ಕೊಟ್ಟಿರುವುದು ಕೇವಲ 5 ರೂ.ಗಳನ್ನು ಮಾತ್ರ. ಕೃಷಿ ಉತ್ಪನ್ನಗಳಿಗೆ ಬೆಲೆ ನಿಗಧಿಮಾಡುವ 'ಕೃಷಿ ಬೆಲೆ ಮಂಡಳಿ' (APC)ಗೆ ವ್ಯವಸಾಯ ರಂಗದಲ್ಲಿ ಹೆಚ್ಚಿರುವ ಉತ್ಪಾದನಾ ಖರ್ಚುಗಳು ಗೊತ್ತೇ ಇರುವುದಿಲ್ಲ.

ಆದರೆ ಹೆಚ್ಚಿಸಲಾಗಿರುವ ಕೇವಲ 5ರೂ.ಗಳು ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವಾಗಿರುವ ಖರ್ಚಿಗೆ ಪರಿಹಾರ ಕೊಡಬಲ್ಲದೆ? ಕ್ವಿಂಟಾಲ್ ಭತ್ತದ ಉತ್ಪಾದನೆಗೆ ಹನ್ನೊಂದುವರೆ ರೂಪಾಯಿಗಳ ಹೆಚ್ಚು ಖರ್ಚು ಬರುತ್ತದೆ ಎಂದು ಲೆಕ್ಕಹಾಕಲಾಗಿದೆ. ಆದರೆ ಸರ್ಕಾರ ರೈತರಿಗೆ ಪ್ರಕಟಿಸಿರುವುದು ಕೇವಲ 5 ರೂ.ಗಳ ಹೆಚ್ಚಳವನ್ನು. ಒಂದು ಕ್ವಿಂಟಾಲ್ ಭತ್ತದ ಉತ್ಪಾದನಾ ಖರ್ಚು 124ರೂ.ಗಳಷ್ಟಾಗುತ್ತದೆ ಎಂದು ತಮಿಳುನಾಡು ಸರ್ಕಾರ ಹೇಳಿದೆ. 125ರೂ.ಗಳಾಗುತ್ತದೆ ಎಂದು ಆಂಧ್ರಪ್ರದೇಶ ಸರ್ಕಾರ ಹೇಳಿದೆ. ನಾನು ಈ ವಿವರಗಳಿಗೆಲ್ಲಾ ಹೋಗಬಯಸುವುದಿಲ್ಲ 'ಕೃಷಿ ಬೆಲೆ ನಿಗಧಿ ಮಂಡಳಿ'ಯ ಓರ್ವ ಸದಸ್ಯರಾದ ಶ್ರೀ ರಣಧೀರ್‌ಸಿಂಘ್ ಅವರು ಕೃಷಿ ಉತ್ಪನ್ನಗಳ ಬೆಲೆ ನಿಗಧಿ ಮಾಡುವ ಕ್ರಮವು ಸಂಪೂರ್ಣವಾಗಿ ತಪ್ಪಾಗಿದೆ ಎಂದು ಹೇಳಿದ್ದಾರೆ. ಮಹಾರಾಷ್ಟ್ರ, ತಮಿಳುನಾಡು, ಗುಜರಾತ್ ಮತ್ತು ಇತರೆ ಸರ್ಕಾರಗಳು ಒಂದು ಕ್ವಿಂಟಾಲ್ ಭತ್ತದ ಉತ್ಪಾದನಾ ವೆಚ್ಚ 116, 117 ಮತ್ತು 149 ರೂ.ಗಳಷ್ಟಾಗುತ್ತದೆ ಎಂದು ಹೇಳಿವೆ ಎಂದು ರಣಧೀರ್‌ಸಿಂಘ್ ಅವರೇ ಹೇಳಿದ್ದಾರೆ. ಹಾಗೆಯೇ ಅವರು ಕೇರಳ ಸರ್ಕಾರದ ತಿಳುವಳಿಕೆ ಕುರಿತೂ ಹೇಳಿದ್ದಾರೆ. ಕೃಷಿ ಉತ್ಪನ್ನ ಬೆಲೆ ನಿಗಧಿ ಮಂಡಳಿಯು ನಿಗಧಿಪಡಿಸುತ್ತಿರುವ ಬೆಲೆಗಳು ವೈಜ್ಞಾನಿಕವಾಗಿಲ್ಲ-ವ್ಯವಹಾರಿಕವಾಗಿಲ್ಲ ಎಂದೂ ಶ್ರೀ ರಣಧೀರ್‌ಸಿಂಘ್ ಹೇಳಿದ್ದಾರೆ. ರಾಜ್ಯ ಸರ್ಕಾರಗಳು ಲೆಕ್ಕಹಾಕಿರುವ ಬೆಲೆಗಳೇ ವ್ಯವಹಾರಿಕ ಬೆಲೆಗಳು ಎಂದು ನಾವು ಪರಿಗಣಿಸಲೇಬೇಕಾಗುತ್ತದೆ.

ಕೃಷಿ ಉತ್ಪನ್ನಗಳ ಬೆಲೆ ನಿಗಧಿ ಮಾಡುವಾಗ ರೈತರ ಕಷ್ಟಗಳು, ಅವರು ಮಳೆಯೊಂದಿಗೆ ಜೂಜಾಡುವ ಪರಿಸ್ಥಿತಿ, ಬೆಳೆ ನಾಶವಾಗುವುದರ ಅಪಾಯ ಮುಂತಾದುವನ್ನು ಗಣನೆಗೆ ತೆಗೆದುಕೊಳ್ಳುವುದೇ ಇಲ್ಲ. ಆದ್ದರಿಂದಲೇ ನಮ್ಮ ರೈತರು ತುಂಬಾ ಕಷ್ಟವನ್ನು ಅನುಭವಿಸುವ ಪರಿಸ್ಥಿತಿ ಬಂದಿದೆ.

ಓಟುಗಳು ಬೇಕಾದಾಗ ಮಾತ್ರ ರಾಜಕೀಯ ಪಕ್ಷಗಳು ಕೈಗಾರಿಕಾ ಉತ್ಪನ್ನ ಮತ್ತು ಕೃಷಿಉತ್ಪನ್ನಗಳ ನಡುವೆ ಸಮತೋಲ ಏರ್ಪಡಿಸುವ ಭರವಸೆಗಳನ್ನು ಕೊಡುತ್ತಾರೆ. ಆದರೆ ಚುನಾವಣೆ ಮುಗಿದು ಕೇಂದ್ರದಲ್ಲಿ ಅಧಿಕಾರಕ್ಕೆ ಬರುವ ಪಕ್ಷದ ಸರ್ಕಾರವು ರೈತರನ್ನು ಸಂಪೂರ್ಣ ಮರೆತುಬಿಡುತ್ತದೆ. ಜುಲೈ 7ರಂದು ಅರ್ಥಮಂತ್ರಿ ವೆಂಕಟರಾಮನ್ ಅವರು ಕೈಗಾರಿಕಾ ಉತ್ಪನ್ನ ಹಾಗೂ ಕೃಷಿ ಉತ್ಪನ್ನಗಳ ಬೆಲೆಗಳ ನಡುವೆ ಸಮತೋಲನ ತರುವುದಾಗಿ ಹೇಳಿದರು. ಆದರೆ ಕೃಷಿಮಂತ್ರಿಗಳ ಹೇಳಿಕೆ ಪ್ರಕಾರ (ಸಂಸತ್ತಿನಲ್ಲಿ) ಸಮತೋಲನ ತರಲು ಸಾಧ್ಯವಿಲ್ಲ. ಈಗ ಯಾವುದು ಸರ್ಕಾರದ ಹೇಳಿಕೆ, ಯಾವುದು ಸರ್ಕಾರದ ಹೇಳಿಕೆಯಲ್ಲ ಎಂಬುದನ್ನು ನಾವು ತಿಳಿದುಕೊಳ್ಳುವದಾದರೂ ಹೇಗೆ? ಆದ್ದರಿಂದ ಎರಡು ವಿಭಿನ್ನ ಹೇಳಿಕೆಗಳನ್ನು ಇಬ್ಬರು ಸಚಿವರುಗಳು ಕೊಟ್ಟಂತಾಗಿದೆ. ಸಮತೋಲನ ತರುವ ಕಡೆ ಸರ್ಕಾರವು ಕೆಲಸ ಮಾಡಿದ್ದೇ ಆದರೆ ಅದನ್ನು ನಾನು ಬಹುವಾಗಿ ಮೆಚ್ಚುತ್ತೇನೆ. ಆದರೆ ಈ ನಿಟ್ಟಿನಲ್ಲಿ ಇದುವರೆಗೆ ಏನೂ ಮಾಡಲಾಗಿಲ್ಲ.

ಹತ್ತಿ ಉತ್ಪಾದನಾ ವೆಚ್ಚದಲ್ಲೂ ಬಹಳ ಏರಿಕೆಯಾಗಿದೆ. ಆದರೆ ಹತ್ತಿ ಬೆಳೆದ ರೈತನಿಗೆ ಸರ್ಕಾರ ಕೊಡುತ್ತಿರುವುದು ತೀರಾ ಕಡಿಮೆ ಬೆಲೆ. ಸಕ್ಕರೆಯ ವಿಷಯದಲ್ಲೂ ಇಂತಹ ಪರಿಸ್ಥಿತಿಯೇ ಇದೆ. ಹತ್ತಿ, ಸೆಣಬು, ಅಥವಾ ಕಬ್ಬು ಹೀಗೆ ಎಲ್ಲದರ ಉತ್ಪಾದನಾ ವೆಚ್ಚವು ಬಹಳಷ್ಟು ಹೆಚ್ಚಿದೆ. ಆದರೆ ಇವೆಲ್ಲವುಗಳಿಗೆ ದೊರೆಯುವ ಬೆಲೆಯು ಉತ್ಪಾದನಾ ವೆಚ್ಚಕ್ಕಿಂತ ತೀರಾ ಕಡಿಮೆ. ಇವೆಲ್ಲವುಗಳಿಗೆ ಸರಕಾರವು ನಿಗದಿಗೊಳಿಸುವ ಬೆಲೆ ತೀರಾ ಕಡಿಮೆ ಮತ್ತು ಉತ್ಪಾದನೆಯ ವೆಚ್ಚ ಮತ್ತು ಸ್ವಲ್ಪವಾದರೂ ಲಾಭಾಂಶ ದೊರೆಯುವಂತಿಲ್ಲ ಈ ನಿಗದಿಗೊಳಿಸಿದ ಬೆಲೆಯಿಂದ. ಬಡರೈತರು ತಯಾರಿಸಿದ ಉತ್ಪನಗಳನ್ನು ಬಂಡವಾಳಗಾರರು ಕೊಂಡುಕೊಂಡು ಆದ ಮೇಲೆಯೇ ಹತ್ತಿ ಕಾರ್ಪೊರೇಷನ್, ಸೆಣಬು ಕಾರ್ಪೊರೇಷನ್, ಫುಡ್ ಕಾರ್ಪೊರೇಷನ್ ಮೊದಲಾದುವುಗಳು ಮಾರುಕಟ್ಟೆಯನ್ನು ಪ್ರವೇಶಿಸುವುದು. ಆಗ ಬಡರೈತರ ಸ್ಟಾಕ್ ಮುಗಿದಿರುತ್ತೆ. ಇದರಿಂದ ಗುತ್ತೇದಾರಿ ಬಂಡವಾಳಗಾರರಿಗೇ ಲಾಭ.

ಬೆಲೆಏರಿಕೆಯ ವಿಚಾರವನ್ನೇ ತೆಗೆದುಕೊಳ್ಳೋಣ. ರೈತನು ಕೊಳ್ಳುವ ಸರಕುಗಳ ಬೆಲೆ ಶೇಕಡಾ 37.5ರಷ್ಟು ಹೆಚ್ಚಿದೆ. ಆದರೆ ಅವನು ಉತ್ಪಾದಿಸಿದ್ದಕ್ಕೆ ಏನು ದೊರೆತಿದೆ? ಗೋಧಿಯ ಬಗ್ಗೆ ಹೇಳುವುದಾದರೆ ಕೇವಲ ಎರಡು ರೂಪಾಯಿ-ಅಂದರೆ ಶೇ. ಎರಡರಷ್ಟು! ಭತ್ತದ ವಿಚಾರದಲ್ಲಿ ಅದು ರೂಪಾಯಿ ಐದು, ಅಂದರೆ ಶೇ.5ರಷ್ಟೂ ಇಲ್ಲ. ನಿಮ್ಮ ವಾದ ಇವರಿಗೆ ಬೆಲೆ ಹೆಚ್ಚಿಗೆ ತೆತ್ತರೆ, ನಾವು ಮಾರಾಟ ಮಾಡುವ ದರವೂ ಬೆಲೆಹೆಚ್ಚಿಸಬೇಕೆಂದು, ಆದರೆ ಯಾಕೆ? ಆಗಲೇ ಹೇಳಿರುವ ಗುತ್ತೇದಾರಿ ಬಂಡವಾಳಗಾರರ ಮೇಲೆ ಕರ ಹೇರಿ ಅದರಿಂದ ಬರುವ ಹಣದಿಂದ ಯಾಕೆ ರೈತರಿಗೆ ಬೆಂಬಲ ಬೆಲೆಕೊಡಬಾರದು? ರೈತರ ಬಗ್ಗೆ ಹೇಳುವುದಾದರೆ ಇವರನ್ನು ಮೋಸಗೊಳಿಸಲಾಗಿದೆ. ಅವರಿಗೆ ನ್ಯಾಯಬೆಲೆಯಲ್ಲಿ ವಸ್ತುಗಳ ಸರಬರಾಜು ಆಗುತ್ತಿಲ್ಲ. ಎಲ್ಲ ಭಾರವನ್ನು ರೈತರ ಮೇಲೆ ಹೇರಲಾಗುತ್ತಿದೆ. ರೈತರು ತುಂಬಾ ಬಾಧೆಪಡುತ್ತಲಿರುವರು. ಸರಕಾರವು ರೈತರಿಗೆ ರಕ್ಷಣೆ ಕೊಡುತ್ತಿಲ್ಲ ಬದಲು ಗುತ್ತೇದಾರಿಗಳ ಹಿತವನ್ನು ರಕ್ಷಿಸುತ್ತಲಿದೆ. ಬೆಲೆಗಳನ್ನು ಈ ರೀತಿಯಿಂದ ಅವರು ಒಂದೇ ಮಟ್ಟಕ್ಕೆ ತರುತ್ತಲಿದ್ದಾರೆ.

ಕೊನೆಯದಾಗಿ ವಿತರಣಾ ವ್ಯವಸ್ಥೆಯ ಬಗ್ಗೆ ಸ್ವಲ್ಪ ಹೇಳಬಯಸುತ್ತೇನೆ. ನ್ಯಾಯಬೆಲೆಯ ಅಂಗಡಿಗಳ ಮೂಲಕ ಜೀವನಾವಶ್ಯಕ ಸಾಮಗ್ರಿಗಳನ್ನು ಜನತೆಗೆ ಒದಗಿಸುವುದಾಗಿ ಎಲ್ಲಾ ಪಕ್ಷಗಳವರೂ ಭರವಸೆ ಇತ್ತಿರುವರು. ಆದರೆ ಏನಾಗಿದೆ? ಈಗಾಗಲೇ ಇರುವ ನ್ಯಾಯಬೆಲೆ ಅಂಗಡಿಗಳಲ್ಲಿ ದೊರೆಯುವ ಸಾಮಗ್ರಿಗಳಲ್ಲದೆ, ಎಣ್ಣೆಗಳು, ಬೆಂಕಿಪೊಟ್ಟಣ, ಚಾ, ಕಾಫಿ, ಬರೆಯುವ ಪುಸ್ತಕಗಳು, ಇತ್ಯಾದಿಯನ್ನೂ ದೊರೆಯುವಂತೆ ಮಾಡುವುದಕ್ಕೆ ಶಿಫಾರಸು ಮಾಡಲಾದಿತ್ತು. ಹೊಸತು ಸಿಗುವುದು ಬಿಡಿಸ್ವಾಮಿ, ಹಿಂದೆ ದೊರೆಯುತ್ತಲಿದ್ದವೇ ಈಗ ಮಾಯವಾಗಿವೆ. ಇವುಗಳ ಬೆಲೆಯಂತೂ ತುಂಬಾ ದುಬಾರಿ. ಈ ವಿಚಾರವಂತೂ ಹಾಗೇ ಇರಲಿ. ನ್ಯಾಯ ಬೆಲೆ ಅಂಗಡಿಗಳಲ್ಲಿ ಮಾರಬೇಕಾಗಿದ್ದ ಸರಕುಗಳೇ ದೊರೆಯದಾಗಿವೆ.

ಈಗ ಇರುವ ವಿತರಣಾ ವ್ಯವಸ್ಥೆಯನ್ನೇ ಸರಿಯಾಗಿ ನಡೆಸಬೇಕಿದ್ದಲ್ಲಿ ಸರಕಾರವು ತುರ್ತು ಕ್ರಮಗಳನ್ನು ತೆಗೆದುಕೊಳ್ಳಬೇಕು. ಸರಕಾರವು ಕೆಲವು ತುರ್ತು ಕ್ರಮಗಳನ್ನು ತೆಗೆದುಕೊಳ್ಳಲೂ ಬಹುದು. ಆದರೆ ಜನಸಾಮಾನ್ಯರ ದೃಷ್ಟಿಯಿಂದ ಅವು ನಿಜವಾಗಲೂ ತುರ್ತು ಕ್ರಮವಾಗಲಾರದು. ಜೀವನಾವಶ್ಯಕ ಸಾಮಗ್ರಿಗಳ ಸಗಟು ವ್ಯಾಪಾರವನ್ನೇ ಸರಕಾರ ವಹಿಸಿಕೊಂಡರೆ ಆಗಮಾತ್ರ ಅದು ನಿಜವಾಗಲೂ ತುರ್ತುಕ್ರಮವಾಗಬಲ್ಲದು. ಸಗಟುವ್ಯಾಪಾರವನ್ನು ರಾಷ್ಟ್ರೀಕರಣ ಮಾಡಿಕೊಳ್ಳಿರಿ ಮತ್ತು ಒಂದು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಸಂಘಟಿಸಿರಿ. ಆಗಲೇ ಜನತೆಗೆ ಸ್ವಲ್ಪವಾದರೂ ಪರಿಹಾರ ದೊರೆಯುವುದು ಸಾಧ್ಯ, ಹೀಗೆ ಮಾಡಿಲ್ಲವಾದರೆ ಬೆಲೆ ಏರಿಕೆ ಮತ್ತು ಹಣದುಬ್ಬರವು ಸದಾ ಮುಂದುವರೆಯುವುದು ನಿಶ್ಚಯ. ಈ ಬಗ್ಗೆ ರಾಷ್ಟ್ರದ ಮೂಲೆ ಮೂಲೆಗಳಲ್ಲೂ ಮಾತುಗಳು ಕೇಳಿಬರುತ್ತಲಿವೆ. ರಾಷ್ಟ್ರದಾದ್ಯಂತ ಅತೃಪ್ತಿಯು ಬೃಹದಾಕಾರವಾಗಿ ಬೆಳೆಯುತ್ತಿದೆ. ಇದರ ಬಗ್ಗೆ ಏನಾದರೂ ಮಾಡಲೇ ಬೇಕು. ಇಷ್ಟನ್ನು ಹೇಳಿ, ನನ್ನ ನಿರ್ಣಯವನ್ನು ಮಂಡಿಸುತ್ತಲಿದ್ದೇನೆ.

●

ರಾಜ್ಯದ ಮೂಲೆಮೂಲೆಗಳಲ್ಲಿ ಯಶಸ್ವಿ ಸಾರ್ವತ್ರಿಕ ಮುಷ್ಕರ

ಕರ್ನಾಟಕ ರಾಜ್ಯದ ಟ್ರೇಡ್ ಯೂನಿಯನ್‌ಗಳ ಜಂಟಿ ಕ್ರಿಯಾಸಮಿತಿಯು, ಅಗತ್ಯಸೇವಾ ಮಸೂದೆ, ಕಾರ್ಮಿಕ ವಿವಾದದಲ್ಲಿ ಪೋಲೀಸ್ ಮಧ್ಯಪ್ರವೇಶ ಇವುಗಳನ್ನು ವಿರೋಧಿಸಿ, 18-8-80ರಂದು ಸಾರ್ವತ್ರಿಕ ಮುಷ್ಕರ ನಡೆಸಲು ಕರೆಕೊಟ್ಟಿತ್ತು. ಅಭೂತಪೂರ್ವ ಯಶಸ್ಸಿನಿಂದ ಮುಷ್ಕರ ನಡೆದ ಬಗ್ಗೆ ನಮಗೆ ರಾಜ್ಯದ ಹಲವಾರು ಕಡೆಗಳಿಂದ ವರದಿಗಳು ಬಂದಿವೆ. ಕಾರ್ಮಿಕವರ್ಗದ ಈ ಐಕ್ಯತೆ ಕರ್ನಾಟಕದ ಕಮ್ಯುನಿಸ್ಟ್ ಚಳುವಳಿಯಲ್ಲಿ ಒಂದು ಸ್ಮರಣಾರ್ಹ ಹೆಜ್ಜೆಯಾಗಿದೆ.

ಚಿಕ್ಕಬಳ್ಳಾಪುರ :

ಇಲ್ಲಿನ ರೇಷ್ಮೆ ಕೆಲಸಗಾರರು, ಕೃಷಿ ಕಾರ್ಮಿಕರು, ಕಲ್ಲು ಕುಟಿಗರು ಮತ್ತು ಮಹಿಳಾ ಕಾರ್ಮಿಕರು ಬೃಹತ್ ಮೆರವಣಿಗೆ ನಡೆಸಿ ಚಿಕ್ಕಬಳ್ಳಾಪುರ ನಗರವನ್ನು ಚಕಿತಗೊಳಿಸಿದರು. ಮೆರವಣಿಗೆಯ ನಾಯಕತ್ವವನ್ನು ಕಾಂ. ಎಸ್. ಲಕ್ಷ್ಮಯ್ಯ, ಕಾಂತರಾಜ್, ರಾಮಯ್ಯ, ಮಂಜಮ್ಮ, ಚಿನ್ನಮ್ಮ, ಅಶ್ವತ್ಥಮ್ಮ, ಕೃಷ್ಣಪ್ಪ, ಮುದ್ದಪ್ಪ, ಹೆಚ್.ಎಸ್. ಸತ್ಯನಾರಾಯಣರಾವ್ ಮುಂತಾದವರು ವಹಿಸಿದ್ದರು. ನಂತರ ಅಸಿಸ್ಟೆಂಟ್ ಕಮೀಷನರಿಗೆ ಮನವಿ ಅರ್ಪಿಸಲಾಯಿತು. ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಕಾರ್ಮಿಕ ಮುಖಂಡ ಕಾಂ. ಎಸ್. ಲಕ್ಷ್ಮಯ್ಯನವರು ವಹಿಸಿದ್ದರು. ಕೋಲಾರ ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಲಕ್ಷ್ಮಣರೆಡ್ಡಿ ಮತ್ತು ಸಿ.ಪಿ.ಐ (ಎಂ) ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಜಿ. ದೊರೆಸ್ವಾಮಿ ಸಭೆಯಲ್ಲಿ ಮಾತನಾಡಿದರು. ಅಗತ್ಯ ಸೇವಾ ಮಸೂದೆ, ಪೋಲೀಸರ ಹಸ್ತಕ್ಷೇಪ, ಬಾಗೇಪಲ್ಲಿ ಗೋಲೀಬಾರ್ ಇವುಗಳನ್ನು ಖಂಡಿಸುವ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು.

ಶಿಡ್ಲಘಟ್ಟ :

ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್ನಿನ ಶಿಡ್ಲಘಟ್ಟ ಶಾಖೆಯ ಆಶ್ರಯದಲ್ಲಿ 18-8-80 ರಂದು ತಾಲ್ಲೂಕು ಕಚೇರಿಯ ಮುಂದೆ ಧರಣಿ ಮುಷ್ಕರ ನಡೆಯಿತು. ನಂತರ ಬೇಡಿಕೆಗಳ ಮನವಿಯನ್ನು ತಹಸೀಲ್ದಾರರಿಗೆ ಒಪ್ಪಿಸಲಾಯಿತು.

ಬಂಟ್ವಾಳ :

ಬಂಟ್ವಾಳ ತಾಲ್ಲೂಕಿನಾದ್ಯಂತ ಸಾರ್ವತ್ರಿಕ ಮುಷ್ಕರ ಅತ್ಯಂತ ಯಶಸ್ವಿಯಾಗಿ ನಡೆಯಿತು. ಎಲ್ಲ ಬೀಡಿ ಡಿಪೋಗಳು, ಮಿಲ್ಲುಗಳು, ಕೈಗಾರಿಕಾ ಸಂಸ್ಥೆಗಳನ್ನು ಮುಚ್ಚಲಾಗಿತ್ತು. ಮುಷ್ಕರದ ಯಶಸ್ಸಿಗಾಗಿ ನೂರಾರು ಸಿ.ಐ.ಟಿ.ಯು. ಕಾರ್ಯಕರ್ತರು ಶ್ರಮಿಸಿದ್ದರು.

ವೀರಾಜಪೇಟೆ :

ಇಂದಿರಾ ಕಾಂಗ್ರೆಸ್ಸಿನ ಇಂಟಕ್ ಹೊರತು ಮಿಕ್ಕೆಲ್ಲ ಕಾರ್ಮಿಕ ಸಂಘಗಳು ಅಂದಿನ ಮುಷ್ಕರದಲ್ಲಿ ಭಾಗವಹಿಸಿದ್ದವು. ಅಗತ್ಯ ಸೇವಾ ಮಸೂದೆ ವಿರೋಧಿಸುವ ಮನವಿಯನ್ನು ಮೆರವಣಿಗೆಯ ನಂತರ ಅರ್ಪಿಸಲಾಯಿತು. ಕುಟ್ಟಾ, ಆನಂದಪುರ, ಇಂಜನಿಗೆರೆ, ಸಿದ್ದಾಪುರ, ನೆಲ್ಲಿಹುದಿಕೇರಿ, ಒಂಟಿಯಂಗಡಿ, ಕಾನಂಕಾಡ್, ಶ್ರೀಮಂಗಲ, ಚೆಟ್ಟಳ್ಳಿ, ಭಜಗೊಲ್ಲಿ, ಪಾಲಿಬೆಟ್ಟ, ಮಾಕುಟ್ಟಗಳಲ್ಲಿ ಮುಷ್ಕರ ಪೂರ್ಣ ಯಶಸ್ಸಿನಿಂದ ನಡೆಯಿತು. ಸಿದ್ದಾಪುರದಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ನಜೀರ್ ಹಾಗೂ ಬಶೀರ್, ಚೆಟ್ಟಳ್ಳಿಯ ಕಾಂ. ಅಂತೋಣಿದಾಸ್ ಇವರನ್ನು ಮುನ್ನೆಚ್ಚರಿಕೆಯಿಂದ ಬಂಧಿಸಲಾಗಿತ್ತು.

ತಿಪಟೂರು :

ತಿಪಟೂರಿನ ವಿದ್ಯುಚ್ಛಕ್ತಿ ಮಂಡಲಿ ನೌಕರರು ಒಂದು ಬಹಿರಂಗ ಸಭೆಯನ್ನು ಏರ್ಪಡಿಸಿದ್ದರು. ಇದರ ಅಧ್ಯಕ್ಷತೆಯನ್ನು ಹೆಚ್. ಟಿ. ಶಿದ್ದಲಿಂಗಶೆಟ್ಟರು ವಹಿಸಿದ್ದರು. ಕಾಂ. ಬಿ. ಡಿ ಆರ್., ಹಿರಿಯ ಕಾರ್ಮಿಕ ಮುಖಂಡರಾದ ಓಬೇಗೌಡರು, ಕಾರ್ಯದರ್ಶಿ ಗ.ರುಸ್ವಾಮಿ ಸಭೆಯಲ್ಲಿ ಮಾತನಾಡಿದರು.

ಬೆಳ್ತಂಗಡಿ :

ಬೆಳ್ತಂಗಡಿ ತಾಲ್ಲೂಕಿನಾದ್ಯಂತ ಮುಷ್ಕರ ಬಂದ್‌ಗಳನ್ನು ಯಶಸ್ವಿಯಾಗಿ ಆಚರಿಸಲಾಯಿತು. ಎಲ್ಲ ಶಾಲೆ, ಕಾಲೇಜು, ವ್ಯಾಪಾರಿ ಸಂಸ್ಥೆಗಳು, ಹೆಸರಾಂತ ಸಂತೆ ಪೂರ್ಣ ಬಂದ್ ಆಗಿದ್ದವು. ಬೆಳ್ತಂಗಡಿಯ ರೈತ ಮತ್ತು ಕಾರ್ಮಿಕ ಸಂಘಗಳ ಮುಂದಾಳುಗಳಾದ ಕಾಂ. ಯಳಚಿತ್ತಾಯ, ಬಿ ಎಂ ಭಟ್ (?), ಪಾಪಚ್ಚನ್, ಚಿನ್ನಪ್ಪ ಪೂಜಾರಿ, ಕರಿಯನಾಯ್ಕ, ಲಕ್ಷ್ಮಣಗೌಡ, ಅಣ್ಣುಗೌಡ, ಪಿ. ಪಿ. ಮಥಾಯ್ ಮೊದಲಾದವರ ನೇತೃತ್ವದಲ್ಲಿ ಬೃಹತ್ ಮೆರವಣಿಗೆ ನಡೆಯಿತು. ಬೆಳ್ತಂಗಡಿ, ಗುರುವಾಯನ ಕೆರೆ, ಉಜಿರೆಗಳಲ್ಲಿ ಸಾರ್ವಜನಿಕ ಸಭೆಗಳು ನಡೆದವು. ನೆರಿಯದಲ್ಲೂ ಸಾರ್ವಜನಿಕ ಸಭೆ ನಡೆಯಿತು. ಅಲ್ಲಿ ಹತ್ತುಮಂದಿಯ ಚಳುವಳಿ ಸಮಿತಿ ರಚಿಸಲಾಗಿದೆ. ಕಳೆಂಜ, ತೋಟತ್ತಾಡಿಗಳಲ್ಲೂ ರೈತರ ಸಭೆ ನಡೆದು ಅಲ್ಲೂ ಚಳುವಳಿ ಸಮಿತಿಗಳನ್ನು ರಚಿಸಲಾಗಿದೆ.

ಶಿವಮೊಗ್ಗ :

ಬೆಳಿಗ್ಗೆ 8 ಗಂಟೆಗೆ ಹೊರಟ ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು, ಕಾರ್ಮಿಕರು, ಆಟೋಚಾಲಕರು, ಹೋಟೆಲ್ ಕಾರ್ಮಿಕರು ಹಾಗೂ ನಾಗರಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಈ ಮೆರವಣಿಗೆಯ ನೇತೃತ್ವವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನಗರಸಮಿತಿ ಕಾರ್ಯದರ್ಶಿ ಕಾಂ. ಎಸ್. ಬಿ ಶಿವಶಂಕರ್, ಕಾಂಗ್ರೆಸ್ (ಯು) ನ ಪಿ. ಆರ್. ಶ್ರೀನಿವಾಸ್, ಪ್ರ. ಯು. ಸಂಘಟನೆಯ ಆರ್. ಗೋಪಾಲನಾಯಕ್, ಲಿಂಗಪ್ಪ, ರವೀಂದ್ರರಾಜ್, ಏಕಾಂಬರಂ ಮುಂತಾದವರು ವಹಿಸಿದ್ದರು. ಈ ಬೃಹತ್ ಮೆರವಣಿಗೆ ಜಿಲ್ಲಾಧಿಕಾರಿಗಳ ಕಚೇರಿ ತಲುಪಿದನಂತರ ಬಹಿರಂಗ ಸಭೆ ನಡೆಯಿತು. ಮನವಿ ಅರ್ಪಿಸಿದ ನಂತರ ನಿರುದ್ಯೋಗಿ ಶಿಕ್ಷಕರ ಮೆರವಣಿಗೆ ನಡೆಯಿತು. ಈ ಮೆರವಣಿಗೆ ನಾಯಕತ್ವ ವಹಿಸಿದವರಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಂ. ಚಂದುಕುಟ್ಟಿ ಅವರೂ ಒಬ್ಬರಾಗಿದ್ದರು.

ಚಿಕ್ಕಮಗಳೂರು :

ಇಲ್ಲಿನ ಕಾಫಿಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕರು ಕ್ಯೂರಿಂಗ್ ವರ್ಕ್ಸ್‌ನ ಗೇಟಿನಲ್ಲಿ ಸಭೆ ಸೇರಿ ಕರಾಳ ಮಸೂದೆಯ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಭೆಯಲ್ಲಿ ಸಿ.ಐ.ಟಿ.ಯು.ನ ಎ.ಕೆ. ವಿಶ್ವನಾಥ್, ಜಿಲ್ಲಾ ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ಸಂಚಾಲಕ ಬಿ.ಎಲ್. ತೋಡಿನ್ನಾಯ ಮಾತನಾಡಿ ಈ ಮಸೂದೆಯಿಂದ ಕಾರ್ಮಿಕರಿಗಾಗುವ ಅನ್ಯಾಯವನ್ನು ವಿವರಿಸಿದರು.

ಕುದುರೆಮುಖ :

ಇಲ್ಲಿನ ಹೆಚ್. ಎಸ್. ಸಿ. ಎಲ್. ಎಂಪ್ಲಾಯೀಸ್ ಅಸೋಸಿಯೇಶನ್ನಿನ ಆಶ್ರಯದಲ್ಲಿ 18-8-80 ರಂದು ಕುದುರೆಮುಖ ಬಂದ್ ಆಚರಿಸಲಾಯಿತು. ಇಡೀ ಕೆಲಸ ಸ್ಥಗಿತಗೊಂಡಿತ್ತು. ಸಾರ್ವಜನಿಕರೂ ಬಂದ್‌ನಲ್ಲಿ ಸಹಕರಿಸಿದ್ದರು.

ಪುತ್ತೂರು :

ಎಲ್ಲ ಕಾರ್ಮಿಕ ಸಂಘಗಳ ಸಹಕಾರದಲ್ಲಿ ಪುತ್ತೂರಿನಲ್ಲಿ ಯಶಸ್ವಿ ಮುಷ್ಕರ ಮತ್ತು ಬಂದ್ ನಡೆಯಿತು. ಬಹಳ ವಹಿವಾಟಿನ ಪುತ್ತೂರಿನ ಸಂತೆಕೂಡ ಬಂದಾಗಿತ್ತು. ಸಾವಿರಾರು ಕಾರ್ಮಿಕರು ಮತ್ತು ಸಾರ್ವಜನಿಕರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು, ಮೆರವಣಿಗೆಯ ಮುಂದಾಳತ್ವವನ್ನು ದಲಿತ ಕಾರ್ಮಿಕ ಮುಖಂಡ ಬಿ. ರಾಮಕೃಷ್ಣ ಮತ್ತು ಜನಪ್ರಿಯ ಶಾಸಕ ಕೆ. ರಾಮಭಟ್ ವಹಿಸಿದ್ದರು, "ಪೋಲೀಸರೇ ನೀವೂ ಕಾರ್ಮಿಕರೇ" ಎಂಬ ಫಲಕ ಜನರ ಗಮನ ಸೆಳೆಯುತ್ತಿತ್ತು. ನಂತರ ರಾಮಭಟ್ ಅವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಕಾರ್ಮಿಕ ಕ್ರಿಯಾಸಮಿತಿಯ ಅಧ್ಯಕ್ಷ ಎಂ. ದಿನಕರ ರೈ ಸ್ವಾಗತಿಸಿದರು. ಸಭೆಯನ್ನು ಉದ್ದೇಶಿಸಿ ಪುರಂದರಭಟ್, ಎ.ಎಸ್. ಅಹಮದ್, ಎಂ. ಡಿ. ಶೆಟ್ಟಿ, ಹೊಳ್ಳ ಮಾತನಾಡಿ ಮಸೂದೆಯನ್ನು ಪ್ರತಿಭಟಿಸಿದರು. ಕೊನೆಗೆ ಕಾರ್ಮಿಕ ಕ್ರಿಯಾ ಸಮಿತಿಯ ಅಪ್ಪಯ್ಯಮಣಿ ವಂದಿಸಿದರು.

ಬಿಜಾಪುರ :

ನೂಲಿನಗಿರಣಿ, ಬೀಡಿ, ನಗರಸಭೆ, ಚೌಗುಲೆ ಇಂಡಸ್ಟ್ರಿ, ಸಕ್ಕರೆ ಕಾರ್ಖಾನೆ, ಜಿನ್ನಿಂಗ್ ಫ್ಯಾಕ್ಟರಿ, ಪವರ್‌ಲೂಮ್ ಹ್ಯಾಂಡ್‌ಲೂಮ್‌ಗಳ ಸಾವಿರಾರು ಕಾರ್ಮಿಕರು ಇಲ್ಲಿ ಚರಿತ್ರಾರ್ಹ ಮುಷ್ಕರದಲ್ಲಿ ಭಾಗವಹಿಸಿದರು. ಬಿಜಾಪುರ, ಜಮಖಂಡಿ, ರಬಕವಿ-ಬನಹಟ್ಟಿಗಳು ಸಂಪೂರ್ಣ ಬಂದ್ ಆಗಿತ್ತು. ಕಾರ್ಮಿಕರ ಮೆರವಣಿಗೆ ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ನಂತರದ ಸಭೆಯಲ್ಲಿ ಎನ್. ಕೆ ಉಪಾಧ್ಯಾಯ, ಬಾಬುರೆಡ್ಡಿ ತುಂಗಳೆ, ಎಲ್. ಬಿ ಲಾಯದಗುಂದಿ, ಚಂಚಲಕರ, ಪ್ರಕಾಶ ಹಿಟ್ಟನಳ್ಳಿ ಮಾತನಾಡಿದರು. ನಂತರ ಪ್ರಮುಖ ಹೋಟೆಲುಗಳ ಮುಂದೆ ಧರಣಿ ನಡೆಸಲಾಯಿತು. ಬಾಗಲಕೋಟೆಯಲ್ಲಿ ಡಿ. ಎಂ. ಖಲಾಸಿಯವರ, ಜಮಖಂಡಿಯಲ್ಲಿ ಹಳಿಂಗಳಿ, ಕಾಶೀಮಠ ನೇತೃತ್ವದಲ್ಲಿ ಮನವಿ ಅರ್ಪಿಸಲಾಯಿತು.

ರಾಯಚೂರು :

ಕಾರ್ಮಿಕ ಸಮನ್ವಯ ಸಮಿತಿಯ ಕರೆಯ ಮೇರೆಗೆ ಬೃಹತ್ ಪ್ರದರ್ಶನ ರಾಯಚೂರಿನಲ್ಲಿ ನಡೆಯಿತು. ಪೋಲೀಸರು 144 ಕಲಮು ಜಾರಿಗೊಳಿಸಿದ್ದರು. ಕಾಂ. ಬಸವರಾಜು ಮತ್ತಿತರರ ನೇತೃತ್ವದಲ್ಲಿ ಎಸ್.ಎಫ್.ಐ. ವಿದ್ಯಾರ್ಥಿಗಳು ಮೆರವಣಿಗೆ ನಡೆಸಿದರು. ಆದರೆ ಪೋಲೀಸರು ಅವಮಾನುಷವಾಗಿ ಈ ಶಾಂತಮೆರವಣಿಗೆಯ ಮೇಲೆ ಲಾಠಿಚಾರ್ಜು ಮಾಡಿದರು. ಮಹಿಳೆಯರು ಮಕ್ಕಳನ್ನು ಹೊಡೆದರು. ಹೋರಾಟವನ್ನು ಮುಂದುವರಿಸಲು ಈಗ ಜಂಟಿ ಕ್ರಿಯಾಸಮಿತಿ ರಚಿಸಲಾಗಿದೆ. ಜನಸಾಮಾನ್ಯರು ಕಾರ್ಮಿಕರ ಬೆಂಬಲಕ್ಕೆ ಮುಂದು ಬಂದಿದ್ದಾರೆ.

ಹರಿಹರ :

ಹರಿಹರ ತಾಲ್ಲೂಕು ಕಾರ್ಮಿಕ ಸಂಘಗಳ ಸಮನ್ವಯ ಸಮಿತಿ ಆಶ್ರಯದಲ್ಲಿ ಹರಿಹರ ಬಂದ್ ನಡೆಯಿತು. ಕಿರ್ಲೋಸ್ಕರ್, ಪಾಲಿಫೈಬರ್ಸ್, ಬೀಡಿ, ಬ್ಯಾಂಕ್, ಕೆ.ಇ.ಬಿ., ಆಟೋ, ಚಿತ್ರಮಂದಿರಗಳ ಸಾವಿರಾರು ಕಾರ್ಮಿಕರು ಮುಷ್ಕರ ನಡೆಸಿದರು. ಕಿರ್ಲೋಸ್ಕರ್ ಮತ್ತು ಪಾಲಿಫೈಬರ್ ಕಾರ್ಮಿಕರು ಕಾರ್ಖಾನೆಯಿಂದ ನಗರದವರೆಗೆ ಮೆರವಣಿಗೆ ನಡೆಸಿದರು. ಇತ್ತೀಚಿನ ಅತಿ ಬೃಹತ್ ಸಭೆ ಎನಿಸಿದ ಬಹಿರಂಗ ಸಭೆ ಸಂಜೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಿರ್ಲೋಸ್ಕರ್ ಕಾರ್ಮಿಕ ಸಂಘದ ಕಾರ್ಯದರ್ಶಿ ಕಾಂ. ಎನ್. ಜಿ ಪಠಾಣ್ ವಹಿಸಿದರು. ಎ.ಐ.ಟಿ.ಯು.ಸಿ.ನ ಕಾಂ. ಜೆ. ಎಂ. ಹನುಮಂತಪ್ಪ, ಸಿ.ಐ.ಟಿ.ಯು.ನ ಕಾಂ. ಇಕ್ಬಾಲ್ ಹುಸೇನ್ ಮಾತನಾಡಿದರು. ಬೀಡಿ ಕಾರ್ಮಿಕರ ಪರವಾಗಿ ಕಾಂ. ಸಯ್ಯದ್‌ಸಾಬ್ ಮಾತನಾಡಿದರು. ಹಿರಿಯ ಮಾರ್ಕ್ಸ್‌ವಾದಿ ಮುಖಂಡ ಕಾಂ. ಸದಾಶಿವಪ್ಪ ವ್ಯವಸ್ಥೆಯನ್ನು ಕಟುವಾಗಿ ಟೀಕಿಸಿದರು. ಪ್ರಾರಂಭದಲ್ಲಿ ಸಿ.ಐ.ಟಿ.ಯು.ನ ಕಾಂ. ಡಿ. ಜಿ. ಜೋಷಿ ಸ್ವಾಗತಿಸಿ, ತ್ರಿಪುರಾ ಜನತೆಗಾಗಿ ಸಂಗ್ರಹಿಸಿದ ನಿಧಿ, ವಸ್ತ್ರಗಳ ವಿವರ ನೀಡಿದರು.

ಕಳಸ :

ಕಳಸ ಹೋಬಳಿಯ ಕಾಫಿ ತೋಟದ ಕೆಲಸಗಾರರು 18-8-80ರಂದು ಮೆರವಣಿಗೆ ನಡೆಸಿದರು. ಮೆರವಣಿಗೆಯ ನೇತೃತ್ವವನ್ನು ಸಿ.ಐ.ಟಿ.ಯು ನ ತೋಟ ಕೆಲಸಗಾರರ ಸಂಘದ ಉಪಕಾರ್ಯದರ್ಶಿ ಕಾಂ. ಕೆ. ಸುಕುಮಾರ್ ಮತ್ತು ಐಟಕ್‌ನ ಕಾಂ. ಶ್ರೀಧರ್ ವಹಿಸಿದ್ದರು. ಕಳಸದ ವ್ಯಾಪಾರಿಗಳು ಅಂಗಡಿಗಳನ್ನು ಮುಚ್ಚಿದ್ದರು. ನಂತರದ ಬಹಿರಂಗ ಸಭೆಯಲ್ಲಿ ಕಾಂ. ಸುಕುಮಾರ್ ಈ ಕರಿಕಾಯಿದೆಯ ವಿರುದ್ಧ ಹೋರಾಡಲು ಕಾರ್ಮಿಕರಿಗೆ ಕರೆಕೊಟ್ಟರು.

ಹುಬ್ಬಳ್ಳಿ :

ಉತ್ತರ ಕನ್ನಡದ ಟ್ರೇಡ್‌ಯೂನಿಯನ್‌ಗಳ ಜಂಟಿ ಸಮನ್ವಯ ಸಮಿತಿಯ ಆಶ್ರಯದಲ್ಲಿ 18-8-80 ರಂದು ಹುಬ್ಬಳ್ಳಿ ಬಂದ್ ಯಶಸ್ವಿಯಾಗಿ ನಡೆಯಿತು. ನಗರದಾದ್ಯಂತ ಮೆರವಣಿಗೆಗಳು ನಡೆದವು. ಹಳೆ ಹುಬ್ಬಳ್ಳಿಯಿಂದ ಐಟಕ್ ನಾಯಕತ್ವದಲ್ಲಿ ಒಂದು, ಕೈಗಾರಿಕಾ ಎಸ್ಟೇಟ್‌ನಿಂದ ಸಿ. ಐ. ಟಿ ಯು. ಸಂಘಗಳ ನಾಯಕತ್ವದ ಇನ್ನೊಂದು ಮೆರವಣಿಗೆ ಹೊರಟವು. ಅನೇಕ ಸ್ವತಂತ್ರ ಸಂಘಗಳು ದಾರಿಯಲ್ಲಿ ಸೇರಿಕೊಂಡವು. ಎರಡೂ ಈದ್‌ಗಾ ಮೈದಾನದಲ್ಲಿ ಒಂದುಗೂಡಿ ಬೃಹತ್ ಬಹಿರಂಗಸಭೆ ನಡೆಯಿತು. ಈ ಭಾರಿ ಜನಸ್ತೋಮದಲ್ಲಿ ಅನೇಕ ಸಮಾಜ ವಿರೋಧಿ ಅಂಶಗಳು ಸೇರಿಕೊಂಡು ಕಲ್ಲೆಸೆತ ನಡೆಸಿದವು. ಈ ನೆಪದಿಂದ ಪೋಲೀಸರು ಗಾಳಿಯಲ್ಲಿ ಗುಂಡುಹಾರಿಸಿ ಜನರನ್ನು ಬೆದರಿಸಿದರು. ನಂತರ, ಸಮನ್ವಯ ಸಮಿತಿ ಸಂಚಾಲಕ ಕಾಂ. ಎಂ. ಸದಾನಂದ್, ಮೈಸೂರು ಕಿರ್ಲೋಸ್ಕರ್‌ನ ಕಮಲಾಕರರಾವ್, ಕಿರ್ಲೋಸ್ಕರ್ ಎಲೆಕ್ಟ್ರಿಕ್ಸ್‌ನ ಸ್ವಾದಿ, ಗುರಪ್ಪನವರ್, ಬಲ್ಲೋಲಿನ್, ಸನತ್‌ಕುಮಾರ್ ಬೆಳಗಲಿ, ನಾರಾಯಣ ಗಾಳದಿ (ಪತ್ರಕರ್ತರ ಸಂಘ) ಬಿ. ಎಂ. ಎಸ್.ನ ಚವಾಣ್ ಸಭೆಯಲ್ಲಿ ಮಾತನಾಡಿದರು. ಐಟಕ್‌ನ ಎ ಜೆ. ಮುಧೋಳ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಪೋಲೀಸರ ಗೋಲೀಬಾರ್ ಬಿಟ್ಟರೆ ಸಭೆ ಮತ್ತು ಬಂದ್ ಶಾಂತವಾಗಿತ್ತು. ನಗರದಲ್ಲಿ ಐದು ದಿನಗಳವರೆಗೆ 144 ಸೆಕ್ಷನ್ ಜಾರಿಯಲ್ಲಿತ್ತು.

ಕಾಂ. ಕೃಷ್ಣಪಿಳ್ಳೆ ದಿನಾಚರಣೆ

1948ರ ಆಗಸ್ಟ್ 19ರಂದು ವಿಷಜಂತುವಿನ ಕಡಿತಕ್ಕೊಳಗಾಗಿ, ದಿವಂಗತರಾದ ಕಮ್ಯುನಿಸ್ಟ್ ಪಕ್ಷದ ಚಳುವಳಿಯ ಮುಂದಾಳು ಕಾಂ. ಕೃಷ್ಣಪಿಳ್ಳೆಯವರ 33ನೇ ಚರಮ ವಾರ್ಷಿಕ ದಿನವನ್ನು ಕೊಂಡಾಡುವ ಸಾರ್ವಜನಿಕ ಸಭೆ ಬಂಗ್ರಮಂಜೇಶ್ವರ ಸಂಕೆದ ಬಳಿ ಸಿ. ಪಿ. ಐ. ಮತ್ತು ಸಿ. ಪಿ. ಎಂ.ಗಳ ಜಂಟಿ ಆಶ್ರಯದಲ್ಲಿ ಜರಗಿತು.

ಕಾಂ. ಕೆ. ರಾಮಚಂದ್ರನವರು ಸಭೆಯನ್ನು ಸ್ವಾಗತಿಸಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಅಹಮ್ಮದ್ ಕುಂಞಿಯವರು ವಹಿಸಿಕೊಂಡರು. ಸಭೆಯಲ್ಲಿ ಮಾತನಾಡಿದ ಕಾಂ. ರಾಮಪ್ಪಮಾಸ್ತರ್, ಕೇರಳ ಕಮ್ಯುನಿಸ್ಟ್ ಚಳುವಳಿಯಲ್ಲಿ ಕಾಂ. ಕೃಷ್ಣಪಿಳ್ಳೆ ವಹಿಸಿದ ಪಾತ್ರವನ್ನು ಸ್ಮರಿಸಿದರು. ಕಾಂ. ಜಾರಪ್ಪಶೆಟ್ಟಿ ಮಾಸ್ತರ್ ವರ್ಕಾಡಿ ಪಂಚಾಯತ್ ಪ್ರೆಸಿಡೆಂಟ್, ಮಾತನಾಡಿ ಕಾಂ. ಕೃಷ್ಣಪಿಳ್ಳೆಯವರು ಹಾಕಿದ ಹಾದಿಯಲ್ಲಿ ಎಲ್ಲರೂ ಮುಂದುವರಿದು ಅವರ ಉದ್ದೇಶವನ್ನು ಈಡೇರಿಸಲು ಸರ್ವರೂ ಪ್ರಯತ್ನಿಸಬೇಕೆಂದು ಕರೆಯಿತ್ತರು. ಕಾಂ. ಬಿ. ಎಂ. ರಾಮಯ್ಯಶೆಟ್ಟಿಯವರು ಮಾತನಾಡಿ, ಕಾಂ. ಕೃಷ್ಣಪಿಳ್ಳೆಯವರ ಹಾದಿಯಲ್ಲಿ ನಡೆದ- ಬಂದ ಕಮ್ಯುನಿಸ್ಟ್ ಪಕ್ಷ ಹಾಗೂ ಉಳಿದ ಎಡ ಪ್ರಜಾಪ್ರಭುತ್ವ ಪಕ್ಷಗಳ ಐಕ್ಯತೆಯಿಂದ ರಚಿತವಾದಿರುವ ಕೇರಳ ಸರಕಾರ ಜನಹಿತ ಧೋರಣೆಯನ್ನು ಪ್ರತಿಯೊಂದು ರಂಗದಲ್ಲಿಯೂ ನಡೆಸುವ ಈ ಸಂದರ್ಭದಲ್ಲಿ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್, ಇಂದಿರಾ ಕಾಂಗ್ರೆಸ್ ಹಾಗೂ ಬಿ.ಜೆ.ಪಿ.ಯವರು ಒಟ್ಟಿಗೆ ಸೇರಿ ಸರಕಾರಕ್ಕೆ ವಿರೋಧವಾಗಿ ಮಾಡುತ್ತಿರುವ ಅನ್ಯಾಯದ ಅಪಪ್ರಚಾರದ ಬಗ್ಗೆ ತಮ್ಮ ವಿವಾಡವನ್ನು ವ್ಯಕ್ತಪಡಿಸುವುದರೊಂದಿಗೆ, ಸರಕಾರವನ್ನು ರಕ್ಷಿಸಲು ಸಾರ್ವಜನಿಕರು ಐಕ್ಯದಿಂದ ಒಂದಾಗಿ ಈ ದುಷ್ಟ ಶಕ್ತಿಗಳನ್ನು ಸೋಲಿಸಬೇಕೆಂದು ಕರೆಯಿತ್ತರು.

ಕಾಂ. ಬಿ. ರಾಜನ್‌ರವರ ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು. ●

ಶಿವಮೊಗ್ಗದಲ್ಲಿ "ಏಕತಾ ದಿನಾಚರಣೆ"

ದಿನಾಂಕ 15ರಂದು ವಿದ್ಯಾರ್ಥಿ ಕ್ರಿಯಾಸಮಿತಿಯೊಂದಿಗೆ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಸೇರಿ "ಏಕತಾ ದಿನಾಚರಣೆ" ಮತ್ತು "ಕರಾಳ ದಿನಾಚರಣೆ"ಯನ್ನು ಆಚರಿಸಲಾಯಿತು.

ಅಂದು ಬೆಳಿಗ್ಗೆ 8 ಗಂಟೆಗೆ ಶಿವಮೊಗ್ಗದ ಕರ್ನಾಟಕ ಸಂಘದಿಂದ ಹೊರಟ ಮೆರವಣಿಗೆಯಲ್ಲಿ ಸರಕಾರದ ಜಾತಿವಾದಿ, ಸರ್ವಾಧಿಕಾರಿ, ಅಧಿಕಾರಶಾಹೀ ಹಾಗೂ ದೇಶ ವಿಭಜನೆ ನೀತಿಯನ್ನು ಖಂಡಿಸಲಾಯಿತು. ಈ ಮೆರವಣಿಗೆಯನ್ನುದ್ದೇಶಿಸಿ. ಕಾಂ. ಶಿವಶಂಕರ್, ವಿದ್ಯಾರ್ಥಿ ಮುಖಂಡರಾದ ರವೀಂದ್ರ ರಾಜ್, ಮುಂತಾದವರು ಮಾತನಾಡಿದರು.

ಮೆರವಣಿಗೆಯ ನೇತೃತ್ವದಲ್ಲಿ ವಿದ್ಯಾರ್ಥಿ ಕ್ರಿಯಾ ಸಮಿತಿಯ ಎಂ. ಆರ್. ರಾಜಶೇಖರ್, ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಆರ್. ಗೋಪಾಲ್‌ನಾಯರ್, ಸಮುದಾಯದ ಕೆ. ಲಕ್ಷ್ಮಿನಾರಾಯಣ್, ಐ. ಪಿ. ಸಿ. (ಯು)ನ ಜಿ. ಎಸ್. ನಾಗರಾಜ್ ಮುಂತಾದವರು ಇದ್ದರು.

ಸಂಜೆ 4 ಗಂಟೆಗೆ ಡಿ ವೈ ಓ. ಕಾರ್ಯಾಲಯದಲ್ಲಿ ಕಾರ್ಯಕರ್ತರುಗಳ ಸಭೆ ಸೇರಿ, "ಏಕತಾ ದಿನ-ಚರಣೆ"ಯ ಬಗ್ಗೆ ಕಾಂ. ಕೆ. ಎಲ್. ಎಸ್. ರಾವ್ ವಿವರಿಸುತ್ತಾ, ಅಸ್ಸಾಂ ಸಮಸ್ಯೆಯನ್ನು ವಿಶ್ಲೇಷಿಸಿದರು.

ಪ್ರಾರಂಭದಲ್ಲಿ ಆರ್. ಗೋಪಾಲ ನಾಯರ್ ಸರ್ವರನ್ನು ಸ್ವಾಗತಿಸಿದರು. ಕೊನೆಯಲ್ಲಿ ಕಾಂ. ಮಂಜುನಾಥ್ ಸಿದ್ಧಲಿಂಗಯ್ಯನವರ ಕ್ರಾಂತಿ ಗೀತೆಗಳನ್ನು ಹಾಡಿದರು. ○

ತುಮಕೂರಿನಲ್ಲಿ ಆರೋಗ್ಯ ಇಲಾಖೆಯ ವಿವಿಧೋದ್ದೇಶ ಸರಕಾರಿ ನೌಕರರ ಸಮಾವೇಶ

ತಾರೀಖು 9-8-1980ರಂದು ತುಮಕೂರಿನ ಇಂಡಿಯನ್ ಮೆಡಿಕಲ್ ಅಸೋಸಿಯೇಷನ್ ಕಟ್ಟಡದಲ್ಲಿ ಕರ್ನಾಟಕ ಸರಕಾರದ ಸಾರ್ವಜನಿಕ ಆರೋಗ್ಯ ಕಾರ್ಯಕರ್ತರ ಸಮಾವೇಶವು ಶ್ರೀಯುತರಾದ ಎಂ. ಶಾಂತಪ್ಪ ಮಾಜಿ ಜಂಟಿ ಕಾರ್ಯದರ್ಶಿ ರಾಜ್ಯ ಸರಕಾರದ ನೌಕರರ ಸಂಘ ಇವರ ಅಧ್ಯಕ್ಷತೆಯಲ್ಲಿ ಸೇರಿತ್ತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಆಯಾ ಶಾಖೆಯ ಸುಮಾರು 200 ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿದ್ದರು. ಮುಖ್ಯ ಅತಿಥಿಗಳಾಗಿ ನಿವೃತ್ತ ಆರೋಗ್ಯ ಇಲಾಖೆಯ ಸೂಪರ್‌ವೈಸರ್ ಶ್ರೀ ಎಸ್. ಆರ್. ನಾಗರಾಜರಾವ್ ಮತ್ತು ತುಮಕೂರು ಜಿಲ್ಲಾ ಸರಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಟಿ. ಕೆ. ಗೋವಿಂದರಾಜುರವರುಗಳು ಆಗಮಿಸಿದ್ದರು. ಸಭೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಆರೋಗ್ಯಕರ್ತರು ಭಾಗವಹಿಸಿದ್ದು ನೌಕರರ ಸಂಘಟನೆಯ ಪುನರ್‌ಚ್ಚೇತನ ಮತ್ತು ವಿವಿಧ ಸಮಸ್ಯೆಗಳ ಬಗ್ಗೆ ಹಾಗೂ ಇತರೆ ಕಾರ್ಮಿಕ ಸಂಘಟನೆಗಳೊಂದಿಗೆ ನೊಂದಾಣಿಕೆಗಳೊಂದಿಗೆ ಸರಕಾರಿ ನೌಕರರ ಸಂಘಟನಾ ಹೋರಾಟದ ಅವಶ್ಯಕತೆ ವಿಚಾರವಾಗಿ ಧಾರವಾಡ, ರಾಯಚೂರು, ಹಾಸನ ಬಿಜಾಪುರ, ತುಮಕೂರು, ಉ. ಕನ್ನಡ, ಮೈಸೂರು ಮತ್ತು ಮಂಗಳೂರಿನಿಂದ ಬಂದಿದ್ದ ಪ್ರತಿನಿಧಿಗಳು ಮಾತನಾಡಿದರು. ತುಮಕೂರಿನಲ್ಲಿ ಅಕ್ಟೋಬರ್ ತಿಂಗಳ 2ನೇವಾರದಲ್ಲಿಆರೋಗ್ಯ ಕಾರ್ಯಕರ್ತರ ಮಹಾಸಮ್ಮೇಳನವನ್ನು ನಡೆಸಬೇಕೆಂದು ತೀರ್ಮಾನಿಸಿ ಕಾಂ. ದಸ್ತಗೀರ್ ಅವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಯಿತು. ಇದಲ್ಲದೆ ತುಮಕೂರು, ಹಾಸನ, ಧಾರವಾಡ, ಶಿವಮೊಗ್ಗ, ಬಿಜಾಪುರ, ಬೆಂಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ ಮೈಸೂರು ಜಿಲ್ಲೆಗಳ 18 ಸದಸ್ಯರುಗಳನ್ನು ಸಿದ್ಧತಾ ಸಮಿತಿಗಾಗಿ ಆರಿಸಲಾಯಿತು. ಈ ಸಭೆಯಲ್ಲಿ ನೌಕರರ 15 ಬೇಡಿಕೆಗಳನ್ನು ಸರಕಾರವು ತಕ್ಷಣವೇ ಈಡೇರಿಸಬೇಕೆಂದು ನಿರ್ಣಯಿಸಿದ್ದಲ್ಲದೆ ಸರಕಾರವು ನೌಕರರ ಹಾಗೂ ಕಾರ್ಮಿಕರ ಮೇಲೆ ತರಲು ಉದ್ದೇಶಿಸಿರುವ 'ಅಗತ್ಯ ಸೇವಾ ಪಾಲನಾ ಮಸೂದೆ' ವಿರುದ್ಧವಾಗಿ ತುಮಕೂರು ಜಿಲ್ಲಾ ಸರಕಾರಿ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಟಿ.ಕೆ. ಗೋವಿಂದರಾಜು ಮಂಡಿಸಿದ ನಿರ್ಣಯವನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿದ್ದಲ್ಲದೆ ಈ ಉದ್ದೇಶಿತ ಮಸೂದೆಯ ವಿರುದ್ಧವಾಗಿ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿ ಸರಕಾರವು ಇಂತಹ ಕರಾಳ ಶಾಸನವನ್ನು ಕೂಡಲೇ ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಲಾಯಿತು. ●

ಧ್ವಜಸ್ತಂಭದ ಉದ್ಘಾಟನೆ

ಜನಶಕ್ತಿ ಕಲಾವೃಂದ, ಉಳ್ಳಾಲ-ಇವರು ಉಳ್ಳಾಲದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಕೊಡುಗೆಯಾಗಿ ಅರ್ಪಿಸಿದ ಧ್ವಜಸ್ತಂಭದ ಉದ್ಘಾಟನೆಯು ದಿನಾಂಕ 10-8-80 ನೇ ಭಾನುವಾರ ಬೆಳಿಗ್ಗೆ ಶ್ರೀಮಾನ್ ಧನಂಜಯ ಮಂಕುಡೆ B.Sc., ಯವರ ಘನ ಅಧ್ಯಕ್ಷತೆಯಲ್ಲಿ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀಮಾನ್ ಯು. ಎಸ್. ಗುರುವಪ್ಪನವರಿಂದ ರಾಷ್ಟ್ರಧ್ವಜವನ್ನು ಹಾರಿಸುವುದರ ಮುಖೇನ ಜರಗಿತು. ಸಂಘದ ಕಾರ್ಯದರ್ಶಿ ಶ್ರೀ ಯು. ಕೆ. ಪೂವಪ್ಪರವರಿಂದ ಸ್ವಾಗತ ಭಾಷಣವೂ, ಸಂಘದ ಸಂಕ್ಷಿಪ್ತ ಪರಿಚಯವೂ ಆದ ಬಳಿಕ, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಉಳ್ಳಾಲ ಟೌನ್ ಪಂಚಾಯತ್ ಸದಸ್ಯರೂ, ಕೋಕ್ಕೋಟು ಶ್ರೀ ಜೈ ವೀರ ಮಾರುತಿ ವ್ಯಾಯಾಮ ಶಾಲೆಯ ಶಿಕ್ಷಕರೂ ಆದಿರುವ ಶ್ರೀಮಾನ್ ಟಿ ರಾಜೀವ ಮೆಂಡನ್‌ರವರು ಭಾಷಣಗೈದರು. ಶ್ರೀಮಾನ್ ಗಂಗಾಧರ್‌ರವರೂ, ಮತ್ತು ಸದ್ರಿಶಾಲಾ ಮುಖ್ಯೋಪಾಧ್ಯಾಯಿನಿಯವರೂ ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿದರು. ಅಧ್ಯಕ್ಷರ ಭಾಷಣವು ಮುಗಿದ ಬಳಿಕ, ಶಾಲಾ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು. ಕೊನೆಯಲ್ಲಿ ಶ್ರೀಯುತ್ ಪಿ. ಉಳ್ಳಾಲ್‌ರವರು ಧನ್ಯವಾದವಿತ್ತರು. ತರುವಾಯ ಜನ-ಗಣ-ಮನದೊಂದಿಗೆ ಸಮಾರಂಭವು ಮುಕ್ತಾಯವಾಯಿತು. ●

ಕಾರ್ಮಿಕ ಸಂಘದ ಸೇರ್ಪಡೆ ಬಗ್ಗೆ ತಪ್ಪು ವರದಿ

ಭಾರತ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯಮಂಡಲಿಯ ಮುಖಪತ್ರಿಕೆಯಾದ ಕೆಂಬಾವುಟದಲ್ಲಿ "ಸೀಟೂನಿಂದ ಎ.ಐ.ಟಿ.ಯು.ಸಿಗೆ" ಎಂಬ ಶಿರೋನಾಮೆಯಲ್ಲಿ ಒಂದು ತಪ್ಪು ವರದಿ 27-7-80ರಂದು ಪ್ರಕಟವಾದಿದೆ. ಅದರಲ್ಲಿ ಚಿಕ್ಕಮಗಳೂರಿನ ಕಳಸದ ಬಳಿಯ ಕಳಸ ಎಸ್ಟೇಟಿನ ಸುಮಾರು 50 ಕಾರ್ಮಿಕರು ಈವರೆಗೆ ಸೀಟೂನ ಸದಸ್ಯರಾಗಿದ್ದರು. ಆದರೆ ಅವರಿಂದ ಸರಿಯಾದ ಮಾರ್ಗದರ್ಶನ ಸಿಕ್ಕದ್ದರಿಂದ, ಸೀಟು ನಾಯಕರ ನೀತಿಯನ್ನು ಪ್ರತಿಭಟಿಸಿ ಸೀಟೂನ ಸಂಘವನ್ನು ಧಿಕ್ಕರಿಸಿ, ಎ.ಐ.ಟಿ.ಯು.ಸಿ.ನ ಯುನೈಟೆಡ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿಗೆ ಸಾಮೂಹಿಕವಾಗಿ ಸೇರಿದ್ದಾರೆ ಎಂದು ಅದರಲ್ಲಿದೆ. ಆದರೆ ಅದು ನಿಜಸಂಗತಿಯಲ್ಲ. ಸಿ.ಐ.ಟಿ.ಯು.ವಿನ ಕೆ.ಪಿ.ಪಿ.ಡಬ್ಲ್ಯು. ಯೂನಿಯನ್ನಿಗೆ ಒಂದು ರಾಜೀನಾಮೆ ಪತ್ರ ಬಂದಿತ್ತು. ಅದರಲ್ಲಿ 41 ಕಾರ್ಮಿಕರ ಸಹಿ ಇತ್ತು. ಆ ಬಗ್ಗೆ ವಿಚಾರಿಸಲು ಹೋದಾಗ, ಕಾರ್ಮಿಕರು ತಾವು ಸೀಟುನ ಸಂಘಕ್ಕೆ ರಾಜೀನಾಮೆ ಕೊಟ್ಟಿಲ್ಲವೆಂದೂ, ಯಾರೋ ಇಬ್ಬರು ಓದು ಬರಹ ಬಾರದ ತಮ್ಮಿಂದ, ಕೆ ಪಿ ಪಿ ಡಬ್ಲ್ಯು ಯೂನಿಯನ್ನಿಗೆ ಕಂಪ್ಲೇಂಟು ಎಂದು ಹೇಳಿ ಸಹಿ ಪಡೆದು, ಸಹಾಯಧನವೆಂದು ಒಂದೊಂದು ರೂಪಾಯಿ ಸಂಗ್ರಹಿಸಿದರೆಂದೂ ಹೇಳಿದರು. ಹಲವಾರು ವರ್ಷಗಳಿಂದ ಸಿ.ಐ.ಟಿ.ಯು. ಸಮರ್ಥ ನಾಯಕತ್ವ ಕೊಟ್ಟಿದೆ. ತಮಗೆ ಅದರಲ್ಲೇ ನಂಬಿಕೆ ಇದೆ ಎಂದು ಹೇಳಿ ಕೆ ಪಿ ಪಿ ಡಬ್ಲ್ಯು.ವಿನಲ್ಲೇ ಮುಂದುವರೆದಿದ್ದಾರೆ ಎಂದು ಕಾಂ. ಕೆ. ಸುಕುಮಾರ್ ತಿಳಿಸಿದ್ದಾರೆ.

ಕಾಂ. ಕೃಷ್ಣಪಿಳ್ಳೆ ನೆನಪಿಗೆ ಜಾಥಾ

ಕುಂಜತ್ತೂರು ಮತ್ತು ಕಣ್ವತೀರ್ಥಗಳ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿ. ಐ. ಟಿ. ಯು. ನೇತೃತ್ವದಲ್ಲಿ 19-8-80ರಂದು ಕಾಮ್ರೇಡ್ ಕೃಷ್ಣಪಿಳ್ಳೆ ಚರಮದಿನದ ಸಲುವಾಗಿ ಪ್ರಭಾತಫೇರಿ ಏರ್ಪಟ್ಟಿತ್ತು. ಪಕ್ಷದ ಮತ್ತು ಸಿ. ಐ. ಟಿ. ಯು. ಕಾರ್ಯಕರ್ತರು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದರು. ಕಣ್ವತೀರ್ಥದಿಂದ ಹೊರಟ ಜಾಥಾ ಕುಂಜತ್ತೂರು ಉದ್ಯಾವರ ಮಾರ್ಗವಾಗಿ ಮಂಜೇಶ್ವರಕ್ಕೆ ಬಂದು ಅಲ್ಲಿ ಕೆ ಎಸ್. ವೈ. ಎಫ್. ಕಾರ್ಯಕರ್ತರನ್ನು ಭೇಟಿಮಾಡಿ ನಂತರ ಕುಂಜತ್ತೂರಿಗೆ ಹಿಂತಿರುಗಿತು. ಸಂಜೆ ಸಾರ್ವಜನಿಕ ಸಭೆ ಜರುಗಿತು.

ತಂತಿ ಮತ್ತು ದೂರವಾಣಿ ನೌಕರರ ಸಂಘದ ಸಭೆ

ಕರ್ನಾಟಕ ರಾಜ್ಯವಲಯ ತಂತಿ ಮತ್ತು ದೂರವಾಣಿ ನೌಕರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು 15-8-80ರಂದು ಉಡುಪಿಯಲ್ಲಿ ನಡೆಯಿತು, ಕಾಂ. ಸಿ. ಅಂಡಿಯವರು ಸಭೆಯ ಅಧ್ಯಕ್ಷತೆ ವಹಿಸಿದ್ದು, ರಾಜ್ಯವಲಯ ಅಧ್ಯಕ್ಷರಾದ ಕಾಂ. ಬಿ. ರಾಮಕೃಷ್ಣ ಮತ್ತು ಪ್ರಧಾನ ಕಾರ್ಯದರ್ಶಿ ಕಾಂ. ಪಿ. ಫಕೀರಪೂಜಾರಿ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು, ಆರಂಭದಲ್ಲಿ ಕಾಂ. ಸೋಮಯ್ಯ ಶೆಟ್ಟಿಯವರು ಸ್ವಾಗತಿಸಿದ ನಂತರ ಕಾರ್ಮಿಕರ ಹೋರಾಟ ಹಾಗೂ ಸ್ವಾತಂತ್ರ್ಯದ ಹಿನ್ನೆಲೆಯ ವರದಿಯನ್ನು ಕಾಂ. ಪ್ರಭಾಕರ ಓದಿದರು. ದುಡಿಯುವ ಜನತೆಗೆ ಸ್ವಾತಂತ್ರ್ಯವಿಲ್ಲ ಅವರು ಆ. 15ನ್ನು ಕರಾಳದಿನವೆಂದು ಆಚರಿಸಬೇಕು. ಅಸಮಾನತೆಯನ್ನು ಕಿತ್ತೊಗೆದು ಸಮಾಜವಾದವನ್ನು ಸೃಷ್ಟಿಸುವುದೇ ನಿಜವಾದ ಸ್ವಾತಂತ್ರ್ಯ ಎಂದು ಕಾಂ. ಬಿ. ರಾಮಕೃಷ್ಣ ಮಾತನಾಡಿದರು. ನಂತರ ಸಭೆಯನ್ನು ಉದ್ದೇಶಿಸಿ, ಕಾಂ. ಮುಕುಂದನ್, ಕಾಂ. ಫಕೀರ ಪೂಜಾರಿ ಮತ್ತು ಇತರರು ಮಾತನಾಡಿದರು. ದುಡಿಯುವವರ ಬೇಡಿಕೆಗಳು ಈಡೇರಬೇಕಾದರೆ ಹೋರಾಟವೊಂದೇ ದಾರಿ ಎಂದು ಅಧ್ಯಕ್ಷತೆ ವಹಿಸಿದ್ದ ಕಾಂ. ಅಂಡಿ ಹೇಳಿದರು.

ಕರ್ನಾಟಕ ಸರ್ಕಾರದ ಅಗತ್ಯ ಸೇವಾಪಾಲನೆ ಮಸೂದೆಯನ್ನು ಹಿಂತೆಗೆದುಕೊಳ್ಳಬೇಕು, ಬೆಲೆ ಏರಿಕೆ ತಡೆಗಟ್ಟಬೇಕು, ತಂತಿ ಮತ್ತು ದೂರವಾಣಿ ನೌಕರರ ವೇತನವನ್ನು 15 ರೂಪಾಯಿಗಳಿಗೆ ಏರಿಸಬೇಕು, ಲೈನ್‌ಮನ್ ಬಡ್ತಿ ಪರೀಕ್ಷೆಯನ್ನು ಕೂಡಲೇ ನಡೆಸಬೇಕು ಮುಂತಾದ ಬೇಡಿಕೆಗಳನ್ನು ಒತ್ತಾಯಿಸುವ ನಿರ್ಣಯಗಳನ್ನು ಸಭೆಯಲ್ಲಿ ಕೈಗೊಳ್ಳಲಾಯಿತು. ○

ಲೇಖನ ಸ್ವಾತಂತ್ರ್ಯವನ್ನು ಸರ್ವಾಧಿಕಾರಿಗಳಿಂದ ರಕ್ಷಿಸಿ

(1ನೇ ಪುಟದಿಂದ)

ಸ್ನೇಹಿತರು ಒಗ್ಗಟ್ಟಾಗಿ ಹೋರಾಡಿದರೆ ಇದು ಸಾಧ್ಯ ಎಂದು ಆತ್ಮ ವಿಶ್ವಾಸದಿಂದ ಹೇಳಿದರು.

ಆಫ್ರಿಕಾ ಕತ್ತಲ ಖಂಡವಾಗಿ ಉಳಿದಿಲ್ಲ :

ದಬ್ಬಾಳಿಕೆಯ ವಿರುದ್ಧ, ಸಾಮ್ರಾಜ್ಯಶಾಹಿಯ ವಿರುದ್ಧ ಜಗತ್ತಿನ ಎಲ್ಲಾ ಕಡೆ ಜನ ಹೋರಾಟಗಳು ನಡೆದು ಬರುತ್ತಿವೆ. ನಮೀಬಿಯ, ಜಿಂಬಾಬ್ವೆ, ನೈರುಬಿ ಮುಂತಾದ ಸ್ವತಂತ್ರ ದೇಶಗಳು ಉದಯವಾಗುತ್ತಿವೆ, ಕಗ್ಗತ್ತಲ ಖಂಡವೆಂದು ಕರೆಯಲಾಗುತ್ತಿದ್ದ ಆಫ್ರಿಕವು ಈಗ ಕಗ್ಗತ್ತಲ ಖಂಡವಾಗಿ ಉಳಿದಿಲ್ಲ. ಅಲ್ಲಿಯೂ ಸ್ವಾತಂತ್ರ್ಯದ ಬೆಳಕು ಕಾಣಲು ಶುರುವಾಗುತ್ತಿದೆ ಎಂದು ತರುಣ ಬರಹಗಾರರ ಗಮನ ಸೆಳೆದ ಗೋವಿಂದಪಿಳ್ಳೈ ಅವರು ಜನ ಹೋರಾಟಗಳನ್ನು ಯಾವ ಸರ್ವಾಧಿಕಾರಿಯೂ ಸದೆ ಬಡಿಯಲಾರ ಎಂದು ಘೋಷಿಸಿದರು.

ಉತ್ತಮವಾದುದು ಎಲ್ಲಿದ್ದರೂ ತನ್ನಿ :

ಶ್ರೇಷ್ಠ ಸಾಹಿತ್ಯ ಯಾವ ದೇಶದ್ದಾದರೂ ಸರಿ ಅದನ್ನು ಭಾರತೀಯ ಭಾಷೆಗಳಲ್ಲಿ ತಂದು ಜನತೆಗೆ ಪರಿಚಯ ಮಾಡಿಕೊಡಿ ಎಂದು ತರುಣ ಸಾಹಿತಿಗಳನ್ನು ಕೇಳಿಕೊಂಡ ಗೋವಿಂದಪಿಳ್ಳೈ ಅವರು, ತನ್ನದು ಮಾತ್ರ ಸರಿ-ಶ್ರೇಷ್ಠ ಎಂಬ ಮಾತನ್ನು ಓರ್ವ ಮಾರ್ಕ್ಸ್‌ವಾದಿಯಾದ ತಾವು ಒಪ್ಪುವುದಿಲ್ಲ ಎಂದರು.

ವಾತಾಪಿ ಸಂಸ್ಕೃತಿ :

ನಮ್ಮ ನಾಡಿನಲ್ಲಿ ಕ್ರಾಂತಿಕಾರಿ ಸಾಹಿತ್ಯ ಇತ್ತು. ಜನಪದ ಸಾಹಿತ್ಯವು ಪ್ರಗತಿಪರವಾದುದು, ವೈಚಾರಿಕವಾದುದು ಆಗಿತ್ತು ಎಂದು ಹೇಳಿದ ಗೋವಿಂದ ಪಿಳ್ಳೈ ಅವರು, ಎಂತಹುದನ್ನೂ ಅರಗಿಸಿಕೊಳ್ಳುವ ವಾತಾಪಿ ಸಂಸ್ಕೃತಿ ನಮ್ಮದಾಗಿದೆ ಎಂದೂ ಸಹ ನುಡಿದರು. ಕ್ರಾಂತಿಕಾರಿ ಬೀಜಗಳು ನಮ್ಮಲ್ಲಿ ಈಗಾಗಲೇ ಆಳವಾಗಿ ಬೇರೂರಿವೆ ಈ ಬೀಜಗಳು ನೆಲದ ಒಡಲಾಳದಿಂದ ಒಡೆದು ಮೊಳಕೆಯಾಗಿ ಬರಬೇಕಾಗಿದೆ ಎಂದು ನುಡಿದ ಸಾಹಿತಿ ಗೋವಿಂದಪಿಳ್ಳೈ, ಇದಕ್ಕೆ ಭೂತದ ಅಧ್ಯಯನ ಅತ್ಯಗತ್ಯ ಎಂದರು. ಸ್ವಂತ ಖುಷಿಗಾಗಿ ಲೇಖನ ಕೃಷಿ ಮಾಡುತ್ತೇವೆ ಎನ್ನುವ ಬರಹಗಾರರನ್ನು ಅರಾಜಕತಾವಾದಿಗಳೆಂದು ಕರೆದ ಪಿಳ್ಳೈ ಅವರು ಸ್ಥಾಪಿತಹಿತಾಸಕ್ತಿಯನ್ನು ಕಾಪಾಡುವ ಲೇಖಕರೂ ಇವರೇ ಆಗುತ್ತಾರೆ ಎಂದರು.

ರೂಪ ಮತ್ತು ವಸ್ತು ಎರಡೂ ಮುಖ್ಯ :

ಶ್ರೇಷ್ಠ ಕಲಾಕೃತಿಯೊಂದಕ್ಕೆ ರೂಪ ಮತ್ತು ವಸ್ತು ಎರಡೂ ಮುಖ್ಯವೆಂದು ಸ್ಪಷ್ಟವಾಗಿ ಹೇಳಿದ ಗೋವಿಂದಪಿಳ್ಳೈ ಅವರು ಇವೆರಡರಲ್ಲಿ ಒಂದಕ್ಕೆ ಮಾತ್ರ ಒತ್ತು ಕೊಡುವ ಕಲೆಗಾರ ಶ್ರೇಷ್ಠ ಕಲಾಕಾರನಾಗಲಾರ ಎಂದರು.

ನಿಸರ್ಗ ಸೌಂದರ್ಯ ನಿಷಿದ್ಧವಲ್ಲ :

ನದಿ, ಗಿಡ, ಮರ, ತಾರೆ ಮುಂತಾದ ನಿಸರ್ಗ ಸೌಂದರ್ಯ ಕುರಿತು ಬರೆಯುವವರು ಪ್ರಗತಿಪರ, ಕ್ರಾಂತಿಕಾರಿ ಬರಹಗಾರರಲ್ಲ ಎಂಬ ಮಾತನ್ನು ತಾವು ಒಪ್ಪುವುದಿಲ್ಲ ಎಂದು ನುಡಿದ ಗೋವಿಂದಪಿಳ್ಳೈ ಅವರು, ಕಾಳಿದಾಸನಿಂದ ಆಧುನಿಕ ಬರಹಗಾರರವರೆಗೆ ಎಲ್ಲರೂ ನಿಸರ್ಗವನ್ನು ವರ್ಣಿಸಿದ್ದಾರೆ ಎಂದರು. ಯಾಕೆಂದರೆ ಮಾನವ ನಿಸರ್ಗದ ಜೊತೆಗೆ ಬದುಕಿಕೊಂಡು ಬಂದಿದ್ದಾನೆ. ನಿಸರ್ಗದ ಜೊತೆಗೆ ತನ್ನನ್ನು ಗುರುತಿಸಿಕೊಂಡಿದ್ದಾನೆ. ಆದ್ದರಿಂದ ನಿಸರ್ಗ ಸೌಂದರ್ಯ ಕುರಿತು ಬರೆಯುವುದು ತಪ್ಪೇನಿಲ್ಲ ಎಂದೂ ಸಹ ಪಿಳ್ಳೈ ನುಡಿದರು. ಕ್ರಾಂತಿಕಾರಿ ಸಾಹಿತಿಗಳಿಗೆ ರಾಜಕೀಯ ಉತ್ತಮ ವಸ್ತುವಾಗಬಲ್ಲುದೇ ಹೊರತು ಅದೇ ಸರ್ವಸ್ವವಾಗದು ಎಂದು ಗೋವಿಂದ ಪಿಳ್ಳೈ ಹೇಳಿದರು. ಸಣ್ಣ ಅಂಶದಿಂದ ಸಮಗ್ರತೆಯನ್ನು, ಸಮಷ್ಟಿಯನ್ನು ಬಿಡಿಸಬಲ್ಲ ಕಲಾಕಾರ ಪ್ರತಿಭಾವಂತ ಹಾಗೂ ಕಲ್ಪನಾ ಶಕ್ತಿಯುಳ್ಳವನಾಗಿರುತ್ತಾನೆ ಎಂದು ಅಭಿಪ್ರಾಯಪಟ್ಟ ಅವರು, ಬರಹಗಾರನಿಗೆ ತನ್ನ ಮಿತಿಯ ಅನುಭವ ತೃಪ್ತಿ ತರುವುದಿಲ್ಲ ಎಂದರು. ಆದ್ದರಿಂದ ಆತ ಇತರರ ಅನುಭವಕ್ಕೂ ನುಗ್ಗುತ್ತಾನೆ. ಸ್ವಾನುಭವದ ಪ್ರಾಕಾರದಲ್ಲಿ ಅದನ್ನು ಅಭಿವ್ಯಕ್ತಿಗೊಳಿಸುತ್ತಾನೆ. ಸ್ವಾನುಭವದ ಮೂಲಕ ಅಭಿವ್ಯಕ್ತಗೊಂಡ ಸಾಹಿತ್ಯವೇ ಶ್ರೇಷ್ಠ ಸಾಹಿತ್ಯ ಎಂದು ಅವರು ಹೇಳಿದರು. ಸಾಹಿತ್ಯ ಕೇವಲ ಮನರಂಜನೆಯ ಸಾಧನ ಎಂಬ ಮಾತನ್ನು ಗೋವಿಂದ ಪಿಳ್ಳೈ ಅವರು ಒಪ್ಪಲಿಲ್ಲ. ಸಾಹಿತ್ಯವು ಮನರಂಜನೆ ಎಂದಾದರೆ ಅದನ್ನು ಕೀಳುಮಾಡುವುದಾಗುತ್ತದೆ.

ಉತ್ತರ ಪ್ರದೇಶ, ದಿಲ್ಲಿ ಮುಂತಾದ ಕಡೆ ನಡೆಯುತ್ತಿರುವ ಗಲಭೆ ದೊಂಬಿಗಳಿಗಿಂತ ಕರ್ನಾಟಕದ ಉತ್ತರ ಭಾಗದಲ್ಲಿ ನಡೆದ ರೈತ ಚಳುವಳಿಯು ಭಿನ್ನವಾದದ್ದು ಮತ್ತು ಆರೋಗ್ಯಕರವಾದದ್ದು ಎಂದು ಅಭಿಪ್ರಾಯಪಟ್ಟ ಗೋವಿಂದಪಿಳ್ಳೈ ಬಡ ಜನರ ಚಳುವಳಿಯು ನಿಮ್ಮ ಸಾಹಿತ್ಯ ರಚನೆಗೆ ಉತ್ತಮ ವಸ್ತು. ಅದನ್ನು ವಸ್ತುನಿಷ್ಠವಾಗಿ ಕೃತಿಯಲ್ಲಿ ಮೂಡಿಸಿ ಎಂದು ಮನವಿ ಮಾಡಿ ಕರ್ನಾಟಕದ ಯುವ ಬರಹಗಾರರಿಗೆ ಕೇರಳದ ಪ್ರಗತಿಪರ ಹಾಗೂ ಕ್ರಾಂತಿಕಾರಿ ಲೇಖಕರ ಶುಭಾಶಯಗಳನ್ನು ಕೋರಿದರು. ನಾಡಿನ ವಿವಿಧ ಭಾಗಗಳ ಬರಹಗಾರರ ವಿಚಾರ ವಿನಿಮಯ ಅಗತ್ಯವೆಂದ ಅವರು ತಮ್ಮನ್ನು ಕರ್ನಾಟಕಕ್ಕೆ ಆಮಂತ್ರಿಸಿದ್ದಕ್ಕೆ ಸಂತೋಷ ವ್ಯಕ್ತಪಡಿಸಿ ವಂದನೆ ಸಲ್ಲಿಸಿದರು. ಕೇರಳ ರಾಜ್ಯಕ್ಕೆ ಕನ್ನಡ ಸಾಹಿತಿಗಳನ್ನು ಆಹ್ವಾನಿಸಿದರು.

ಸುಮಾರು 95 ನಿಮಿಷಗಳ ಶ್ರೀ ಗೋವಿಂದಪಿಳ್ಳೈ ಅವರ ವಿದ್ವತ್ ಪೂರ್ಣ ಇಂಗ್ಲೀಷ್ ಭಾಷಣವನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರೊಫೆಸರ್ ಚಂದ್ರಶೇಖರ ಪಾಟೀಲ್ ಕನ್ನಡಕ್ಕೆ ಅನುವಾದಿಸಿದರು.

ಬಂಡಾಯ ಸಾಹಿತ್ಯ ಸಂಘಟನೆಯ ಕೇಂದ್ರ ಸಂಚಾಲಕ ಬರಗೂರು ರಾಮಚಂದ್ರಪ್ಪನವರು ಆರಂಭದಲ್ಲಿ ಸ್ವಾಗತಿಸಿದರು. ಸಾಹಿತ್ಯ ಸಮ್ಮೇಳನದ ಸ್ವಾಗತ ಸಮಿತಿಯ ಸಂಚಾಲಕ ಪ್ರೊಫೆಸರ್ ಹಿಪ್ಪರಗಿ ಅವರು ಅತಿಥಿಗಳನ್ನು ಸ್ವಾಗತಿಸಿ ವಚನ ಚಳುವಳಿ ಜರುಗಿದ ಬಿಜಾಪುರ ಜಿಲ್ಲೆಗೆ ತಮ್ಮೆಲ್ಲರನ್ನು ಸ್ವಾಗತಿಸಲು ಹರ್ಷವಾಗುತ್ತದೆ ಎಂದು ನುಡಿದರು.

●

ಆಗಸ್ಟ್ 19ರ ಕಾರ್ಯಕ್ರಮ : ದಾಂಡೇಲಿಯಲ್ಲಿ ಯಶಸ್ವಿ

ರಾಜ್ಯ ಸರ್ಕಾರವು ತರಲು ಉದ್ದೇಶಿಸಿರುವ ಕಾರ್ಮಿಕ ವಿರೋಧಿ 'ಅಗತ್ಯ ಸೇವಾ ಶಾಸನ'ದ ವಿರುದ್ಧ ರಾಜ್ಯಾದ್ಯಂತ ನಡೆದ ಒಂದು ದಿವಸದ ಕಾರ್ಮಿಕ ಮುಷ್ಕರವು ಕೈಗಾರಿಕಾ ಪಟ್ಟಣವಾದ ಉ. ಕನ್ನಡ ಜಿಲ್ಲೆಯ ದಾಂಡೇಲಿಯಲ್ಲಿ ಸಂಪೂರ್ಣ ಯಶಸ್ವಿಯಾಯಿತೆಂದು ತಡವಾಗಿ ಬಂದ ನಮ್ಮ ದಾಂಡೇಲಿ ವರದಿ ತಿಳಿಸಿದೆ. ಒಂದು ದಿವಸದ ಸಾರ್ವತ್ರಿಕ ಮುಷ್ಕರವು ವಾಸ್ತವವಾಗಿ 'ದಾಂಡೇಲಿ ಬಂದ್' ಆಗಿ ಪರಿವರ್ತನೆಗೊಂಡಿತೆಂದೂ ವರದಿ ತಿಳಿಸಿದೆ.

'ದಾಂಡೇಲಿ ಬಂದ್' ಅನ್ನು ಶಾಂತಿಯುತವಾಗಿ ಆಚರಿಸಿದ ಸಿ.ಐ.ಟಿ.ಯು. ಮುಂದಾಳುಗಳಿಗೆ ಸ್ಥಳೀಯ ಪೋಲೀಸ್ ಅಧಿಕಾರಿಗಳು ವಂದನೆ ಸಲ್ಲಿಸಿದರೆಂದೂ ವರದಿ ಹೇಳಿದೆ.

ತ್ರಿಪುರಾಕ್ಕೆ 500ರೂ. ಸಹಾಯ :

ತ್ರಿಪುರದಲ್ಲಿ ಇತ್ತೀಚೆಗೆ ನಡೆದ ಗಲಭೆಯಲ್ಲಿ ನೊಂದ ನಿರಪರಾಧಿ ಜನತೆಯ ಪರಿಹಾರ ನಿಧಿಗೆ ಸಿ.ಐ.ಟಿ.ಯು. ಕಾರ್ಮಿಕ ಸಂಘಟನೆಗೆ ಸಂಯೋಜನೆಗೊಂಡಿರುವ ವೆಸ್ಟ್‌ಕೋಸ್ಟ್ ಪೇಪರ್ ಮಿಲ್ಸ್ ಯೂನಿಯನ್ ಕಾರ್ಮಿಕರು 500 ರೂಪಾಯಿಗಳನ್ನು ಕಳುಹಿಸಿ ಕೊಟ್ಟಿದ್ದಾರೆ.

●

ಸಂಪಾದಕೀಯ

(1ನೇ ಪುಟದಿಂದ)

ಕೆಲಸಗಳ ವೆಚ್ಚವನ್ನು ಸರ್ಕಾರ ಗ್ರಾಮೀಣ ಪ್ರದೇಶದಿಂದ ಮಾತ್ರ ವಾಪಸ್ಸು ಪಡೆಯಬೇಕೇಕೆ ? ವಿದ್ಯುತ್ ಉತ್ಪಾದನಾ ಕೇಂದ್ರಗಳ ಮೇಲೆ ಸರ್ಕಾರ ಸಾವಿರಾರು ಕೋಟಿ ರೂಪಾಯಿಗಳನ್ನು ಖರ್ಚುಮಾಡಿಲ್ಲವೆ ? ಈ ವೆಚ್ಚವನ್ನು ವಾಪಸ್ಸು ಪಡೆಯಲು ಸರ್ಕಾರ ಕೈಗಾರಿಕೋದ್ಯಮಿಗಳ ಮೇಲೆ "ಅಭಿವೃದ್ಧಿ ತೆರಿಗೆ" ಹೇರಿದೆಯೆ ?

ಇಂಥ ಅಸಂಬದ್ಧ ಆಲೋಚನೆಗಳನ್ನು ಹೊಂದಿರುವ ಬಸವಲಿಂಗಪ್ಪ ಮತ್ತು ಇತರರು ಅಂಥವನ್ನು ಬಿಟ್ಟುಕೊಟ್ಟು, ದೃಢವಾದ ಜನಪರ ನೀತಿಗಳನ್ನು ಹೊಂದಿ, ಜನತೆಯ ಹಕ್ಕುಗಳನ್ನು ಕಾಪಾಡಿ ಬಲಪಡಿಸಬೇಕು. ವಿರೋಧಪಕ್ಷದಸ್ಥರಾಗಲಂತೂ ಅವರು ಸರ್ಕಾರದ ನೀತಿಗಳನ್ನು ಸಮರ್ಥಿಸುವುದನ್ನು ನಿಲ್ಲಿಸಬೇಕು.

'ಜಾತೀಯತೆ ವಿರುದ್ಧ ನಿರಂತರ ಸಮರ ನಡೆಸಿ'

ಹಲವಾರು ಶತಮಾನಗಳಷ್ಟು ಹಳೆಯದಾದ ಜಾತೀಯತೆಯು 20ನೇ ಶತಮಾನದಲ್ಲೂ ಅಸ್ತಿತ್ವದಲ್ಲಿರುವುದು ನಾಚಿಕೆಗೇಡು. ಆಧುನಿಕತೆಗೆ ಹೊಂದಿಕೊಳ್ಳದ ಜಾತಿಪದ್ಧತಿಯ ವಿರುದ್ಧ ನಿರಂತರ ಸಮರ ನಡೆಸಬೇಕೆಂದು ಉಸ್ಮಾನಿಯ ವಿಶ್ವವಿದ್ಯಾಲಯದ ಪ್ರೊಫೆಸರ್ ಜಾದವ್ ಅವರು ಯುವ ಜನರಿಗೆ ಕರೆ ಕೊಟ್ಟಿದ್ದಾರೆ.

ಬಿಜಾಪುರದಲ್ಲಿ ಜರುಗಿದ ಬಂಡಾಯ ಸಾಹಿತ್ಯ ಸಮ್ಮೇಳನದ ಸಮಾರೋಪ ಭಾಷಣ ಮಾಡಿದ ಪ್ರೊ. ಜಾದವ್ ಅವರು ಜಾತಿ ಪದ್ಧತಿಯ ನಿರ್ಮೂಲನೆಗೆ ಅಂತರಜಾತೀಯ ವಿವಾಹವೇ ಮದ್ದು ಎಂದರು. ಜನಪರವಾದ ಸೋಷಿಯಲಿಸ್ಟ್ ಚಳುವಳಿ ಮತ್ತು ಕಮ್ಯುನಿಸ್ಟ್ ಚಳುವಳಿಯು ಅಂತರರಾಷ್ಟ್ರೀಯ ಮಟ್ಟದಲ್ಲಿ ಸೇರಿದಂತೆ ಎಲ್ಲಾ ಕಡೆ ಒಡೆದು ಹೋಗಿರುವ ಬಗ್ಗೆ ದುಃಖ ವ್ಯಕ್ತಪಡಿಸಿದ ಶ್ರೀಯುತರು, ಜನಾಂದೋಲನಗಳು ಮುಂದುವರಿದುಕೊಂಡು ಹೋಗಲು ಯುವ ಜನರ ಕಾಣಿಕೆಯು ಇಂದು ಅತ್ಯಗತ್ಯ ಹಾಗೂ ಮಹತ್ವದ್ದಾಗಿದೆ ಎಂದರು.

ಲೇಖನ ಸ್ವಾತಂತ್ರ್ಯವು ಬರಹಗಾರನಿಗೆ ಪ್ರಜಾಪ್ರಭುತ್ವ ಹಕ್ಕಾದರೆ, ನಮ್ಮ ದೇಶದ ಹರಿಜನರಿಗೆ ಸಾರ್ವಜನಿಕ ಭಾವಿಗಳಲ್ಲಿ, ನಲ್ಲಿಗಳಲ್ಲಿ ನೀರು ತೆಗೆದುಕೊಳ್ಳುವುದು, ಊರಿನ ಹೊರಗಡೆ ಅಲ್ಲದೆ ಊರಿನ ಮಧ್ಯದಲ್ಲಿ ಇತರೆ ಜಾತಿಗಳವರ ನಡುವೆ ವಾಸಿಸುವುದು ಪ್ರಜಾಪ್ರಭುತ್ವ ಹಕ್ಕಾಗಿದೆ ಎಂದರು. ರೈತರು ತಾವು ಬೆಳೆದ ಉತ್ಪನ್ನಗಳಿಗೆ ನ್ಯಾಯ ಬೆಲೆ ಪಡೆಯುವುದು ಅವರ ಪ್ರಜಾಪ್ರಭುತ್ವದ ಅರ್ಥವಾಗಿದೆ ಎಂದೂ ಹೇಳಿದ ಪ್ರೊ. ಜಾದವ್ ಅವರು, ಈ ಬಡ ಹರಿಜನರ, ರೈತರ ಬದುಕಿನ ಸ್ಥಿತಿಗಳನ್ನು ಮತ್ತು ಉತ್ತಮ ಜೀವನಕ್ಕಾಗಿ ಅವರು ನಡೆಸುವ ಹೋರಾಟಗಳನ್ನು ಯಥಾವತ್ತಾಗಿ, ವಸ್ತುನಿಷ್ಠವಾಗಿ ತಮ್ಮ ಕೃತಿಗಳಲ್ಲಿ ರಚಿಸಬೇಕೆಂದು ಯುವ ಬರಹಗಾರರಿಗೆ ಮನವಿ ಮಾಡಿದರು.

ಹೈದರಾಬಾದಿನಿಂದ ಆಗಮಿಸಿ ಎರಡು ದಿನಗಳ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ ಈ ಸಮಾಜವಾದಿ ಬುದ್ಧಿಜೀವಿಯು ಉರ್ದು, ಹಿಂದಿ ಹಾಗೂ ನಡುನಡುವೆ ಇಂಗ್ಲೀಷಿನಲ್ಲಿ ಭಾಷಣ ಮಾಡಿದರು.

ನಿರ್ಣಯಗಳು :

ಸಮಾರೋಪ ಸಮಾರಂಭದ ನಂತರ ನಡೆದ ಪ್ರತಿನಿಧಿಗಳ ಸಭೆಯಲ್ಲಿ ಅಂಗೀಕರಿಸಲಾದ ಮುಖ್ಯ ನಿರ್ಣಯಗಳು ಇಂತಿವೆ. 1) ದೇವರಾಜ ಅರಸು ಸರ್ಕಾರವು ಸಂಸ್ಕೃತವನ್ನು ಶಿಕ್ಷಣ ರಂಗದಲ್ಲಿ ಪ್ರಥಮ ಸ್ಥಾನದಿಂದ ತೃತೀಯ ಸ್ಥಾನಕ್ಕೆ ಇಳಿಸಿದ ಜನಪರ ಕ್ರಮವನ್ನು ಗುಂಡೂರಾಯರ ಸರ್ಕಾರ ಬುಡಮೇಲು ಮಾಡಿ ಸಂಸ್ಕೃತವನ್ನು ಮತ್ತೆ ಪ್ರಥಮಸ್ಥಾನಕ್ಕೆ ಏರಿಸಿದ್ದನ್ನು ಬಂಡಾಯ ಸಾಹಿತ್ಯ ಸಮ್ಮೇಳನ ಖಂಡಿಸುತ್ತದೆ. ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಅಗ್ರಸ್ಥಾನವಿರಬೇಕು ಮತ್ತು ಎಲ್ಲ ಮಟ್ಟಗಳಲ್ಲಿ ಆಡಳಿತವು ಕನ್ನಡ ಭಾಷೆಯಲ್ಲೇ ನಡೆಯಬೇಕೆಂದು ಸಮ್ಮೇಳನವು ಸರ್ಕಾರವನ್ನು ಒತ್ತಾಯಿಸುತ್ತದೆ.

2) ತಮಿಳುನಾಡು ಸರ್ಕಾರವು ಕೆಲವು ಬರಹಗಾರರ ಮೇಲೆ ನಿರ್ಬಂಧ ಹೇರುವುದರ ಮೂಲಕ ಲೇಖನ ಸ್ವಾತಂತ್ರ್ಯವನ್ನು ಕಿತ್ತುಕೊಂಡಿರುವುದನ್ನು ಬಂಡಾಯ ಸಾಹಿತ್ಯ ಸಮ್ಮೇಳನವು ಉಗ್ರವಾಗಿ ಖಂಡಿಸುತ್ತದೆ. ತಮಿಳುನಾಡಿನ ಬರಹಗಾರರ ಮೇಲೆ ಹೇರಿರುವ ನಿರ್ಬಂಧವನ್ನು ತೆಗೆಯಬೇಕೆಂದು ಸಮ್ಮೇಳನ ಒತ್ತಾಯಿಸುತ್ತದೆ.

●

ಐಕ್ಯರಂಗಕ್ಕೆ

ಚಂದಾದಾರರಾಗಿರಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT